ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

ಡಿಜಿಟಲ್ ನ್ಯೂಸ್ ಕಹಾನಿ

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue: 225 ಸಂಚಿಕೆ: 225 | Date: 30-09-2026 Wednesday | RNI NO: KARKAN/2021/80805 | L2/RNP-1285/TMR/2025-27 | Page: 4 ಪುಟ: 4 | Price: 1.00 ಬೆಲೆ: 1.00 ರೂ

ಸಣ್ ಸುದ್ದಿ

ಕುಡಿಯುವ ನೀರಿನ ಸಮಸ್ಯೆ

ಬೆಳ್ಳಂಬೆಳಗ್ಗೆ ಗ್ರಾಮಕ್ಕೆ ತಹಸೀಲ್ದಾರ್ ವಿಸಿಟ್



ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ: ತಾಲೂಕಿನ ಹುಳಿಯಾರು ಹೋಬಳಿ, ಹೊಯ್ಸಳಕಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನುಲೆನೂರು ಗ್ರಾಮದಲ್ಲಿ ತೀವ್ರವಾಗಿರುವ ಕುಡಿಯುವ ನೀರಿನ ಸಮಸ್ಯೆ ಕುರಿತು ಗ್ರಾಮಸ್ಥರಿಂದ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಮಮತಾ ಅವರು ಬೆಳ್ಳಂಬೆಳಗ್ಗೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದರೂ ಪಿಡಿಒ ಹಾಗೂ ಆಡಳಿತಾಧಿಕಾರಿಗಳು ಜನರ ಸಮಸ್ಯೆಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ದೂರವಾಣಿ ಕರೆ ಮಾಡಿದರೂ ಸ್ವೀಕರಿಸುತ್ತಿಲ್ಲ ಎಂದು ಗ್ರಾಮಸ್ಥರು ತಹಸೀಲ್ದಾರ್ ಅವರ ಗಮನಕ್ಕೆ ತಂದರು.

ಗ್ರಾಮಸ್ಥರ ಅಹವಾಲು ಆಲಿಸಿದ ತಹಸೀಲ್ದಾರ್ ಮಮತಾ ಅವರು ಸ್ಥಳೀಯ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳ ಪರಿಶೀಲನೆ ವೇಳೆ ಬೋರ್‌ವೆಲ್‌ನಲ್ಲಿ ನೀರು ಲಭ್ಯವಿದ್ದರೂ ಪೈಪ್‌ಲೈನ್, ಪಂಪ್ ಹಾಗೂ ಮೋಟರ್ ಅಳವಡಿಸದ ಕಾರಣ ನೀರು ಪೂರೈಕೆ ಸಾಧ್ಯವಾಗದಿರುವುದು ಗಮನಕ್ಕೆ ಬಂದಿದೆ. ಈ ಕಾಮಗಾರಿ ಕೈಗೊಳ್ಳುವಂತೆ ಎರಡು ತಿಂಗಳ ಹಿಂದೆಯೇ ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ ಇದುವರೆಗೂ ಕ್ರಮ ಕೈಗೊಂಡಿಲ್ಲ ಎಂದು ತಹಸೀಲ್ದಾರ್ ಅಸಮಾಧಾನ ವ್ಯಕ್ತಪಡಿಸಿದರು.

"ಎರಡು ತಿಂಗಳ ಹಿಂದೆಯೇ ಪೈಪ್‌ಲೈನ್ ಹಾಗೂ ಪಂಪ್ ಮೋಟರ್ ಅಳವಡಿಸುವಂತೆ ಸೂಚಿಸಿದ್ದೆ. ಇದುವರೆಗೂ ಕ್ರಮ ಕೈಗೊಂಡಿಲ್ಲ. ನಾಳೆ ಗ್ರಾಮೀಣ ಕುಡಿಯುವ ನೀರು ಇಲಾಖೆಯ ಇಂಜಿನಿಯರ್‌ಗೆ ಸೂಚನೆ ನೀಡಲಾಗಿದ್ದು, ಅವರು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕು. ಸಮಸ್ಯೆಗೆ ಪರಿಹಾರ ಸಿಗಲಿದೆ," ಎಂದು ತಹಸೀಲ್ದಾರ್ ಮಮತಾ ತಿಳಿಸಿದರು.

ಅಧಿಕಾರಿಗಳು ಜನರಿಗೆ ಸ್ಪಂದಿಸುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಎಲ್ಲಾ ಪಿಡಿಒಗಳು ಹಾಗೂ ಆಡಳಿತಾಧಿಕಾರಿಗಳ ಸಂಪರ್ಕ ಸಂಖ್ಯೆಯನ್ನು ಮಾಧ್ಯಮಕ್ಕೆ ನೀಡುವುದಾಗಿ ತಹಸೀಲ್ದಾರ್ ಮಮತಾ ತಿಳಿಸಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಅಧಿಕಾರಿಗಳು ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ ಎಂಬ ಆರೋಪದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಅವರ ಈ ಹೇಳಿಕೆ ಗಮನ ಸೆಳೆದಿದೆ.

ಸಿಂಹಾದ್ರಿ ಕುಟುಂಬಕ್ಕೆ ಸರ್ಕಾರಿ ಕೆಲಸ ಕೊಡಿ




ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ತಾಲೂಕಿನ ಕಸಪುರ ಗ್ರಾಮದಲ್ಲಿ ದಲಿತ ಕುಟುಂಬದ ಸಿಂಹಾದ್ರಿ ಎಂಬ ಯುವಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತುಮಕೂರು ಮಾದರ ಮಹಾಸಭಾದ ಪೋಷಕರಾದ ಮಾಜಿ ಶಾಸಕ ಗಂಗಾಹನುಮಾಯ್ಯ್, ಜಿಲ್ಲಾ ಅಧ್ಯಕ್ಷರಾದ ವೈ.ಎಚ್. ಹುಚ್ಚಯ್ಯ ಅವರು ತಂಡ ಮಧುಗಿರಿ ಶಾಸಕ ಕೆ ಎನ್ ರಾಜಣ್ಣ ಅವರನ್ನು ಭೇಟಿ ಮಾಡಿ ಯುವಕನ ಕುಟುಂಬಕ್ಕೆ ಸರ್ಕಾರಿ ಉದ್ಯೋಗ ಸೇರಿದಂತೆ ಸೂಕ್ತ ಜೀವನೋಪಾಯ ಕಲ್ಪಿಸುವಂತೆ ಮನವಿ ಮಾಡಲಾಯಿತು. ಈ ಸಂಭದಲ್ಲಿ ಮಹಾಸಭಾದ ಮುಖಂಡರಾದ ಮಧುಗಿರಿ ಅಧ್ಯಕ್ಷರಾದ ಗೋಪಾಲಯ್ಯ, ಜೆಸಿಬಿ ವೆಂಕಟೇಶ್ ಸಂಘಟನಾ ಕಾರ್ಯದರ್ಶಿ ರಘು, ಮಾಧ್ಯಮ ವಕ್ತರ ರವಿ ಚಿಂಪಗಾನಹಳ್ಳಿ ಸೇರಿದಂತೆ ಇತರರು ಜೊತೆಗಿದ್ದರು.

ಕಬ್ಬಿಣದ ಪೈಪಿನಿಂದ ಹಲ್ಲೆ ; ಆರೋಪಿಗೆ ಶಿಕ್ಷೆ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ: ಪಾವಗಡ ತಾಲ್ಲೂಕಿನ ದೊಮ್ಮತ್ತಮರಿ ಗ್ರಾಮದಲ್ಲಿ ವ್ಯಕ್ತಿಯೊಬ್ಬರ ಮೇಲೆ ಕಬ್ಬಿಣದ ಸಲಾಕೆಯಿಂದ ಭೀಕರವಾಗಿ ಹಲ್ಲೆ ನಡೆಸಿದ ಪ್ರಕರಣದಲ್ಲಿ ಆರೋಪಿ ಗಿರೀಶ್ ಬಾಬು ಎಂಬಾತನಿಗೆ ಅಪರಾಧ ಸಾಭೀತಾದ ಹಿನ್ನೆಲೆಯಲ್ಲಿ ಮಧುಗಿರಿಯ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸುಮಂಗಲ ಎಸ್ ಬಸವಣ್ಣನವರ್ ರವರು, 2 ವರ್ಷ ಸಾಧಾರಣ ಮತ್ತು ಹತ್ತು ಸಾವಿರ ದಂಡ ವಿಧಿಸಿ ಶಿಕ್ಷೆ ನೀಡಿ ದಂಡದ ಮೊತ್ತದ ಹಣದಲ್ಲಿ ರೂ 5000 ರೂ ಹಣವನ್ನು ಗಾಯಾಳು ರಮೇಶ್‌ರವರಿಗೆ ಪರಿಹಾರವಾಗಿ ನೀಡುವಂತೆ ಆದೇಶಿಸಿ ಮಹತ್ವದ ತೀರ್ಪು ನೀಡಿದ್ದಾರೆ.

ಪ್ರಕರಣದ ಹಿನ್ನೆಲೆ: ದೊಮ್ಮತ್ತಮರಿ ಗ್ರಾಮದ ಗೋವಿಂದಪ್ಪ ಬಿನ್ ನಾರಾಯಣಪ್ಪ ಎಂಬುವವರ ಅಣ್ಣ ರಮೇಶ್ ದಿನಾಂಕ 30.06.2023 ರಂದು ಬೆಳಿಗ್ಗೆ ಸುಮಾರು 8.30 ಗಂಟೆಗೆ ರಮೇಶ್ ರವರು ದೊಡ್ಡತ್ತಮರಿ ಗ್ರಾಮದ ಪಾವಗಡ ರಸ್ತೆಯ ಮೂಲಕ ತಮ್ಮ ಹೊಲದ ಬಳಿ ಹೋಗುತ್ತಿದ್ದಾಗ, ಅದೇ ಗ್ರಾಮದ ವಾಸಿಯಾದ ಆರೋಪಿ ಗಿರೀಶ್ ಬಾಬು ಎಂಬ ವ್ಯಕ್ತಿಯು ಏಕಾಏಕಿ ಕಬ್ಬಿಣದ ಪೈಪಿನಿಂದ ರಮೇಶ್ ರವರ ಮೇಲೆ ಹಲ್ಲೆ ನಡೆಸಿ ತೀವ್ರವಾಗಿ ಗಾಯಗೊಳಿಸಿ, ಬೆದರಿಕೆ ಹಾಕಿ ಪರಾರಿಯಾಗಿರುತ್ತಾನೆ.ಈ ಪ್ರಕರಣ ಕುರಿತು ಪೊಲೀಸ್ ಅಧಿಕಾರಿಗಳಾದ ರೇವಣ್ಣ ಶೆಟ್ಟಿ ಹಾಗೂ ಗುರುನಾಥ್ ರವರು ಸುಧೀರ್ಘ ತನಿಖೆ ನಡೆಸಿ ಅಗತ್ಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದರು.ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ನಿರಂಜನಮೂರ್ತಿ ಬಾಲವಾಡಿಮಠರವರು ಪ್ರಖರವಾಗಿ ವಾದ ಮಂಡಿಸಿದ್ದರು. ಅಭಿಯೋಗದ ಪರ ವಾದ ಮತ್ತು ತನಿಖಾಧಿಕಾರಿಗಳು ಸಲ್ಲಿಸಿದ್ದ ಸಾಕ್ಷ್ಯಾಧಾರಗಳನ್ನು ಪುರಸ್ಕರಿಸಿದ ಮಾನ್ಯ ನ್ಯಾಯಾಧೀಶರು, ಆರೋಪಿಗೆ ಸೂಕ್ತ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.

'ಕಾಂಗ್ರೆಸ್‌ನಿಂದ ಮಾದಿಗ ಸಮುದಾಯಕ್ಕೆ ಅಧಿಕಾರ ನೀಡದೆ ವಾಮನನಂತೆ ತುಳಿದ ಪರಮೇಶ್ವರ್

ತುಮಕೂರಿನಲ್ಲಿ ರಾಜಕೀಯ ಅಧಿಕಾರಕ್ಕಾಗಿ ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ವೈ.ಹೆಚ್. ಹುಚ್ಚಯ್ಯ ಆಕ್ರೋಶ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಮಾದಿಗ ಸಮುದಾಯವನ್ನು ಮೂಲೆ ಗುಂಪು ಮಾಡುತ್ತಿದೆ. ಸರ್ಕಾರದ ಅನೇಕ ಅಧಿಕಾರಸ್ಥರು, ಕಾಣದ ಕೈಗಳು ಮಾದಿಗ ಮುಖಂಡರು ಅಧಿಕಾರಕ್ಕೆ ಬಾರದಂತೆ ವ್ಯವಸ್ಥಿತವಾಗಿ ವಂಚನೆ ಮಾಡುತ್ತಿದ್ದಾರೆ ಎಂದು ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾಧ್ಯಕ್ಷ ವೈ.ಹೆಚ್. ಹುಚ್ಚಯ್ಯ ಆಪಾದಿಸಿದರು.

ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅನೇಕ ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ಶ್ರಮಿಸುತ್ತಿರುವ ಮಾದಿಗ ಸಮಾಜದ ಮುಖಂಡರನ್ನು ಕೇವಲ ದುಡಿಯಲು ಮಾತ್ರ ಇಟ್ಟುಕೊಂಡು ಅಧಿಕಾರ ತಪ್ಪಿಸುತ್ತಿದ್ದಾರೆ. ತುಮಕೂರು ಜಿಲ್ಲೆಯಲ್ಲೂ ಇದೇ ಬೆಳವಣಿಗೆ ಇದೆ. ಜಿಲ್ಲೆಯ ಕಾಂಗ್ರೆಸ್‌ಗೆ ದುಡಿಯುತ್ತಿರುವ ಅನೇಕ ನಾಯಕರಿಗೆ ಅಧಿಕಾರ ಸಿಗದಂತೆ ಜಿಲ್ಲಾ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಪರಮೇಶ್ವರ್ ನೋಡಿಕೊಂಡಿದ್ದಾರೆ ಎಂದು ದೂರಿದರು.

ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಮಾಜಿ ಶಾಸಕ ಗಂಗಹನುಮಯ್ಯ, ಕೆಂಚಮಾರಯ್ಯ, ನರಸೀಯಪ್ಪ, ವಾಲೆ ಚಂದ್ರಯ್ಯ, ನಾರಾಯಣ ಮೂರ್ತಿ, ರಾಮಕೃಷ್ಣ ಜಯ ಮೂರ್ತಿ, ಪಾವಗಡ ನರಸಪ್ಪ ಮೊದಲಾದವರಿಗೆ ಯಾವುದೇ ರಾಜಕೀಯ ಅಧಿಕಾರ ನೀಡಿಲ್ಲ. ಟೂಡಾ ಅಧ್ಯಕ್ಷ ಸ್ಥಾನ ಅಥವಾ ನಿಗಮ, ಮಂಡಳಿಗಳಲ್ಲಿ ಅವಕಾಶ ಕೊಡಬಹುದಿತ್ತು.ಆದರೆ ಕೊಟ್ಟಿಲ್ಲ. ಮಾದಿಗರು ಮಾತ್ರವಲ್ಲ, ಛಲವಾದಿಗಳಿಗೂ ಡಾ.ಪರಮೇಶ್ವರ್ ಅಧಿಕಾರ ನೀಡಿಲ್ಲ ಎಂದರು.

ವಾಮನನು ಬಲಿ ಚಕ್ರವರ್ತಿಯನ್ನು ತುಳಿಯುವಂತೆ ಡಾ. ಪರಮೇಶ್ವರ್ ಅವರು ವಾಮನನಾಗಿ ಮಾದಿಗ ಸಮಾಜದ ಮುಖಂಡರಿಗೆ ಅವಕಾಶ ಸಿಗದಂತೆ ತುಳಿಯುತ್ತಿದ್ದಾರೆ ಎಂದು ಟೀಕಿಸಿದ ವೈ.ಹೆಚ್. ಹುಚ್ಚಯ್ಯ, ಚುನಾವಣೆ ಸಂದರ್ಭದಲ್ಲಿ ಮತಕ್ಕಾಗಿ ಮಾದಿಗ ಸಮುದಾಯ ಮುಖಂಡರನ್ನು ಬಳಸಿಕೊಂಡು ರಾಜಕಾರಣ ಮಾಡಿಕೊಂಡು ಬರುತ್ತಿದ್ದಾರೆ ಎಂದರು.ಜಿಲ್ಲೆಯಲ್ಲಿ ಬಹು ಸಂಖ್ಯಾತರಾದ ಮಾದಿಗ ಸಮುದಾಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಯಾವುದೇ ಅಧಿಕಾರ ಸ್ಥಾನ ನೀಡದೆ ವಂಚನೆ ಮಾಡುತ್ತಾ ಬಂದಿರುತ್ತಾರೆ. ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಮಾದಿಗ ಸಮುದಾಯದ ಸುಮಾರು 30 ಸಾವಿರ ಮಾದಿಗ ಜನಾಂಗದ ಮತದಾರರಿದ್ದು, ಚುನಾವಣೆ ಫಲಿತಾಂಶದ ನಿರ್ಣಾಯಕರಾಗಿದ್ದಾರೆ. ಮಾದಿಗ ಸಮಾಜ ಜಿಲ್ಲೆಯ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಹೆಚ್ಚು ಶಾಸಕರನ್ನು ಗೆಲ್ಲಿಸಲು ಪಕ್ಷದಲ್ಲಿರುವ ಮುಖಂಡರು ಶ್ರಮ ವಹಿಸಿದ್ದಾರೆ.ಮಾದಿಗ ಸಮುದಾಯದ ನಾಯಕರಿಗೆ ಯಾವುದೇ ಸ್ಥಾನಮಾನ ನೀಡದಂತೆ ಜಿಲ್ಲಾ ಉಸ್ತುವಾರಿ ಸಚಿವರು ನೋಡಿಕೊಂಡಿದ್ದಾರೆ. ಈಗಾಗಲೇ ಅನೇಕ ಬಾರಿ ತುಮಕೂರಿನ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಮಾಡುವಂತೆ ಹಾಗೂ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ ಇತರೆ ಎಲ್ಲ ರಾಜ್ಯ ಮಟ್ಟದ ನಿಗಮ ಅಥವಾ ಮಂಡಳಿಯ ಅಧ್ಯಕ್ಷರನ್ನಾಗಿ, ಉಪಧ್ಯಕ್ಷರನ್ನಗಿ ನೇಮಿಸುವಂತೆ ಮಾದಿಗ ಸಮಾಜ ಉಪ ಮುಖ್ಯಮಂತ್ರಿಯವರನ್ನು ಹಾಗೂ ಮುಖ್ಯಮಂತ್ರಿಗಳು, ಕಾಂಗ್ರೆಸ್ ಅಧ್ಯಕ್ಷರಿಗೆ ಮನವಿ ಮಾಡುತ್ತಾ ಬಂದಿದೆ. ಆದರೆ ಉಪ ಮುಖ್ಯಮಂತ್ರಿ ಪರಮೇಶ್ವರ ಇದಾವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಮಾದಿಗ ಸಮಾಜವನ್ನು ನಿರ್ಲಕ್ಷಿಸಿದ್ದಾರೆ. ಪ್ರಸ್ತುತ ಮುಖ್ಯಮಂತ್ರಿಗಳು ಹೊಸದಾಗಿ ನಿಗಮ ಹಾಗೂ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುತ್ತಿರುವ ಈ ಸಂದರ್ಭದಲ್ಲಿ ತುಮಕೂರ ಜಿಲ್ಲೆಯ ಕಾಂಗ್ರೆಸ್ಸಿಗರನ್ನು ನಿಗಮ ಅಥವಾ ಮಂಡಳಿಯ ಅಧ್ಯಕ್ಷರನ್ನಾಗಿ, ಉಪಾಧ್ಯಕ್ಷರನ್ನಾಗಿ ಮತ್ತು ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಬೇಕೆಂದು ಸಮುದಾಯದ ಪರವಾಗಿ ಒತ್ತಾಯಿಸುತ್ತೇನೆ ಎಂದು ವೈ.ಹೆಚ್. ಹುಚ್ಚಯ್ಯ ಹೇಳಿದರು. ಜಿಲ್ಲೆಯ ಎರಡು ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲೂ ಮಾದಿಗ ಸಮಾಜದ ನಾಯಕರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ಕೊಡದೆ ಕಡೆಗಣಿಸಿದೆ. ಹೀಗೆ ಕಾಂಗ್ರೆಸ್ ಪಕ್ಷ ಸಮುದಾಯವನ್ನು ನಿರ್ಲಕ್ಷ ಮಾಡಿದರೆ ಮಾದಿಗ ಮುಖಂಡರೇ 'ಕಾಂಗ್ರೆಸ್ ಬಿಟ್ಟು ಹೊರಬನ್ನಿ' ಎಂಬ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮಾದರ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಡಾ.ಮುಕುಂದ್, ಖಜಾಂಚಿ ಗಂಗರಾಜು, ನಗರ ಅಧ್ಯಕ್ಷ ರಂಗಸ್ವಾಮಿ, ಕಾರ್ಯದರ್ಶಿ ರಾಜಣ್ಣ, ತುಮಕೂರು ಗ್ರಾಮಾಂತರ ಅಧ್ಯಕ್ಷ ಹೊಳಕಲ್ಲು ಆಂಜನಪ್ಪ, ಕಾರ್ಯದರ್ಶಿ ದಾಸಪ್ಪ, ಮುಖಂಡರಾದ ರಘು, ಸದಾಶಿವಯ್ಯ, ವರದಯ್ಯ, ಸತ್ಯಪ್ಪ, ಕೃಷ್ಣಪ್ಪ, ಅಶ್ವತ್ಥ ನಾರಾಯಣ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಸಿಎಂ ಡಿಕೆ ಶಿವಕುಮಾರ್ ಕುಟುಂಬದ ವಿರುದ್ಧವೇ ಭೂಕಬಳಿಕೆ ಆರೋಪ ಮಾಡಿದ ಕುಮಾರಸ್ವಾಮಿ

ಸೂರ್ಯಪ್ರಗತಿನ್ಯೂಸ್.ಕಾಂ



ಕರ್ನಾಟಕ ಸಿಎಂ ಡಿಕೆ ಶಿವಕುಮಾರ್ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನಡುವಿನ ರಾಜಕೀಯ ಸಮರ ತೀವ್ರ ಸ್ವರೂಪ ಪಡೆದುಕೊಂಡಿದೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಹೆಚ್‌ಡಿಕೆ, ಮುಖ್ಯಮಂತ್ರಿಗಳು ಮತ್ತು ಅವರ ಕುಟುಂಬದ ವಿರುದ್ಧ ಭೂಕಬಳಿಕೆ ಆರೋಪ ಮಾಡಿದ್ದಾರೆ. ಅಲ್ಲದೆ ಆ ಸಂಬಂಧ ಹಲವು ದಾಖಲೆಗಳನ್ನೂ ರಿಲೀಸ್ ಮಾಡಿದ್ದಾರೆ. BMIC ಯೋಜನೆಗೆಂದು ಪಡೆದಿದ್ದ ಸಿದ್ಧಗಂಗಾ ಮಠಕ್ಕೆ ಸೇರಿದ 7 ಎಕರೆ ಭೂಮಿ ವಿಚಾರವಾಗಿಯೂ ಬಿಗ್ ಬಾಂಬ್ ಸಿಡಿಸಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಕುಟುಂಬದ ವಿರುದ್ಧವೇ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬಿಗ್ ಬಾಂಬ್ ಸಿಡಿಸಿದ್ದು, ಭೂಕಬಳಿಕೆ ಆರೋಪ ಮಾಡಿದ್ದಾರೆ. ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿರುವ ಹೆಚ್‌ಡಿಕೆ, ತಾವು ಮಾಡಿರುವ ಗಂಭೀರ ಆರೋಪಗಳ ಸಂಬಂಧ ಹಲವು ದಾಖಲೆಗಳನ್ನೂ ರಿಲೀಸ್ ಮಾಡಿದ್ದಾರೆ. 2003ರಲ್ಲಿ ಸಿಎಂ ಡಿಕೆಶಿ ಆಸ್ತಿ 4 ಕೋಟಿ ರೂ. ಇತ್ತು. ಆದರೆ 2023ರಲ್ಲಿ ಅದು 1,413 ಕೋಟಿ ರೂ. ಆಗಿದೆ. ಇದಕ್ಕೆ ಕಾರಣ ಒಡಿಪಿ (ಭೂಮಿಯ ಬಳಕೆ ಉದ್ದೇಶ) ಬದಲಾವಣೆ ಮಾಡಿದ್ದು ಎಂದು ದೂರಿರುವ ಅವರು, 2003ರಿಂದ 2023ರವರೆಗಿನ ದಾಖಲೆಯನ್ನೂ ಮುಂದಿಟ್ಟಿದ್ದಾರೆ.

ಸಿಎಂ ಡಿಕೆ ಶಿವಕುಮಾರ್ ಕುಟುಂಬದವರ ಹೆಸರಿನಲ್ಲಿ ನೈಸ್ ಯೋಜನೆ ವ್ಯಾಪ್ತಿಗೆ ಬರುವ ಜಮೀನು ಖರೀದಿ ಬಗ್ಗೆಯೂ ಉಲ್ಲೇಖಿಸಿರುವ ಕುಮಾರಸ್ವಾಮಿ, ಜಮೀನು ಖರೀದಿಸಿರುವ ದಾಖಲೆ ಪತ್ರವನ್ನೂ ಬಿಡುಗಡೆ ಮಾಡಿದ್ದಾರೆ. ನಾನು ಟೇಕ್ ಓವರ್ ಮಾಡಲು ಯತ್ನಿಸ್ತಿಲ್ಲ ಅಂತಾರೆ, ಆದರೆ ಇದಕ್ಕೆ ಏನು ಹೇಳ್ತೀರಾ ಎಂದು ಡಿಕೆಶಿ ಅವರನ್ನು ಪ್ರಶ್ನಿಸಿದ್ದಾರೆ. 2004ರ ನ.3ರಂದು ಸರ್ಕಾರದ ಆಸ್ತಿಯನ್ನು ಡಿ.ಕೆ.ಸುರೇಶ್ ಖರೀದಿಸಿದ್ರು, ಯಾರದ್ದೋ ಹೆಸರಿನಲ್ಲಿದೆ ಎಂದು ಸುಮಾರು 10 ಎಕರೆ ಭೂಮಿ ಖರೀದಿ ನಡೆದಿದ್ದು, ಅದು ಸರ್ಕಾರದ ಯೋಜನೆಗೆ 1997ರಲ್ಲಿ ನೋಟಿಫೈ ಆಗಿದ್ದ ಭೂಮಿಯಾಗಿದೆ. ಅದನ್ನು 2026ರಲ್ಲಿ ಸಿಎಂ ಡಿಕೆ ಪುತ್ರಿ ಆಭರಣ ಖರೀದಿ ಮಾಡುತ್ತಾರೆ ಎಂದು ಹೆಚ್‌ಡಿಕೆ ಹೇಳಿದ್ದಾರೆ.

ಅಧಿಕಾರಿಗಳಿಗೆ ಹೆದರಿಸಿ ಗೋಮಾಳವನ್ನೂ ಬರೆಸಿಕೊಂಡಿದ್ದು, 150–200 ಎಕರೆಗೂ ಹೆಚ್ಚು ಅವರ ಹೆಸರಿಗೆ ಮಾಡಿಕೊಂಡಿದ್ದಾರೆ. ಅವೆಲ್ಲವೂ ನೈಸ್ ಕಂಪನಿಯ ವ್ಯಾಪ್ತಿಯ ಭೂಮಿ. ಕೆಐಎಡಿಬಿ ಭೂಮಿ ಸ್ವಾಧೀನಪಡಿಸಿಕೊಂಡಿದ್ದ ಭೂಮಿ ಈಗ ಇವರ ಹೆಸರಿನಲ್ಲಿದೆ. ನಾನು ಬ್ಲ್ಯಾಕ್ ಮೇಲ್ ಮಾಡ್ತಿದ್ದೇನೆಂದು ಡಿಕೆಶಿ ಹೇಳುತ್ತಾರೆ. ಡಿಕೆಶಿ ಅವರೇ ನಾನು ಬ್ಲ್ಯಾಕ್‌ಮೇಲ್ ಮಾಡ್ತಿರುವುದು ನಿಜ. ಆದರೆ ಅಕ್ರಮವಾಗಿ ಭೂಮಿ ಖರೀದಿಸಿದ್ದೀರಲ್ಲ, ಅದಕ್ಕೆ ಉತ್ತರ ಕೊಡಿ ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.



'BMIC ಯೋಜನೆಗೆಂದು ಪಡೆದಿದ್ದ ಸಿದ್ದಗಂಗಾ ಮಠದ ಜಮೀನಲ್ಲೂ ಅಕ್ರಮ'

BMIC ಯೋಜನೆಗೆಂದು ಸಿದ್ಧಗಂಗಾ ಮಠಕ್ಕೆ ಸೇರಿದ 7 ಎಕರೆ ಭೂಮಿ ತೆಗೆದುಕೊಂಡಿದ್ದರು. ಆದರೆ ರಸ್ತೆಗೆ 1 ಎಕರೆ ಹೋಗಿದೆ, ಉಳಿದ ಭೂಮಿ ಕೊಡಿ ಎಂದು ಶ್ರೀಗಳು ಅರ್ಜಿ ಕೊಡ್ತಾರೆ. ಈ ವಿಚಾರಕ್ಕೆ ನನ್ನ ಮನೆಗೆ ಬರಬೇಡಿ. ಆಶೀರ್ವಾದ ಮಾಡೋಕೆ ಮಾತ್ರ ಬನ್ನಿ ಎಂದು ಸಿದ್ದಗಂಗಾ ಸ್ವಾಮೀಜಿಗೆ ಹೇಳ್ತಾರೆ ಎಂದೂ ತಿಳಿಸಿರುವ ಕೇಂದ್ರ ಸಚಿವ, ಸಿಎಂ ಡಿಕೆಶಿ ಮಾತನಾಡಿದ್ದು ಎನ್ನಲಾದ ಆಡಿಯೋವನ್ನೂ ಬಿಡುಗಡೆ ಮಾಡಿದ್ದಾರೆ.

ಅಹಿಂದ ಸಮಾಜಗಳಿಗೆ ರಾಜಕೀಯ ಅಧಿಕಾರ ಸಿಕ್ಕಿದ್ದರೆ ಅದು ಕಾಂಗ್ರೆಸ್ ಪಕ್ಷದಿಂದ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಅಹಿಂಧ ಅಂತಹ ಸಮಾಜಗಳಿಗೆ ಏನಾದರೂ ರಾಜಕೀಯ ಅಧಿಕಾರ ಸಿಕ್ಕಿದ್ದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಹಿಂದುಳಿದ ವರ್ಗಗಳ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಈ ತಳ ಸಮುದಾಯಗಳ ಸಬಲೀಕರಣಕ್ಕೆ ಒಂದಲ್ಲ ಒಂದು ಯೋಜನೆಯನ್ನು ರೂಪಿಸುತ್ತಲೇ ಬಂದಿದೆ. 'ಉಳುವವನೇ ಭೂಮಿಯ ಒಡೆಯ', ಹಾವನೂರು ಆಯೋಗದ ಮೂಲಕ ಮೀಸಲಾತಿ, ಇದರ ಫಲವಾಗಿ ಸರ್ಕಾರಿ ಉದ್ಯೋಗ. ಬೇರೆ ಸಮುದಾಯಗಳ ರೀತಿಯಲ್ಲಿ ಪೈಪೋಟಿ ನೀಡಲು ಸಾಧ್ಯವಾಗದಿದ್ದರೂ ಒಂದಷ್ಟು ಪಾಲು ಪಡೆಯಲು ಸಾಧ್ಯವಾಗಿರುವುದು ಕಾಂಗ್ರೆಸ್ ಕಾಲದಲ್ಲಿ ಎಂದರು.

'ಉಳುವವನೇ ಭೂಮಿ ಒಡೆಯ' ಯೋಜನೆಯ ಫಲ ಎಲ್ಲಾ ವರ್ಗದ ಬಡವರಿಗೂ ಅನುಕೂಲವಾಗಿದೆ. ಬಂಗಾರಪ್ಪನವರ ಕಾಲದಲ್ಲಿ ಆರಾಧನೆ, ಆಶ್ರಯ, ಕನ್ನಡ ಮಾಧ್ಯಮ ಕೃಪಾಂಕ, ವೀರಪ್ಪ ಮೊಯ್ಲಿ ಕಾಲದಲ್ಲಿ ತಂದ ಸಿಇಟಿ (CET) ಯಿಂದಾಗಿ ನನ್ನಂತಹ ಅನೇಕರು ಇಂಜಿನಿಯರ್, ಡಾಕ್ಟರ್ ಆಗಲು ಸಾಧ್ಯವಾಯಿತು. ನೀಟ್ ಹಗರಣದಿಂದ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾದರು. ಆದರೆ ಸಿಇಟಿಯಿಂದ ಇದುವರೆಗೂ ಒಬ್ಬ ವಿದ್ಯಾರ್ಥಿಗೂ ಅನ್ಯಾಯವಾಗಿಲ್ಲ. ಸಿದ್ಧರಾಮಯ್ಯನವರ ಅನ್ನಭಾಗ್ಯ, ಪಂಚ ಗ್ಯಾರಂಟಿ ಎಲ್ಲವೂ ಒಂದು ವರ್ಗಕ್ಕೆ ಸೀಮಿತವಾಗಿಲ್ಲ. ಕಾಂಗ್ರೆಸ್‌ಗೆ ಮತ ನೀಡದ, ಪಂಚ ಗ್ಯಾರಂಟಿಗಳನ್ನು ಟೀಕಿಸಿದವರೇ ಹೆಚ್ಚು ಫಲಾನುಭವಿಗಳು. ಪಂಚ ಗ್ಯಾರಂಟಿಗಳಿಂದ ಮಹಿಳಾ ಸಬಲೀಕರಣ ಸಾಧ್ಯವಾಗಿದೆ ಎಂದು ಡಿ.ಟಿ. ಶ್ರೀನಿವಾಸ್ ತಿಳಿಸಿದರು.

ರಾಷ್ಟ್ರಮಟ್ಟದಲ್ಲೂ ಹಿಂದುಳಿದ ವರ್ಗದ ನಾಯಕರ ಕೈಯಲ್ಲಿ ಅಧಿಕಾರ ಸಿಕ್ಕಂತಹ ಸಂದರ್ಭದಲ್ಲಿ ತುಳಿತಕ್ಕೆ ಒಳಗಾದ ಸಮುದಾಯಗಳನ್ನು ಮೇಲೆತ್ತುವ ಕೆಲಸವಾಗಿದೆ. ಇಂತಹ ಯಾವ ನಿರ್ದೇಶನವೂ ಬಿಜೆಪಿ, ಜೆಡಿಎಸ್ ಪಕ್ಷದಲ್ಲಿ ಇಲ್ಲ. "ಮದ್ದು ಗುಂಡುಗಳೇ ಅವರ ಸಾಧನೆ" ಎಂದು ಲೇವಡಿ ಮಾಡಿದ ಡಿ.ಟಿ. ಶ್ರೀನಿವಾಸ್, ರಾಷ್ಟ್ರಮಟ್ಟದಲ್ಲಿ ಹಿಂದುಳಿದ ಹಿಂದೂಗಳು ಬಿಜೆಪಿಗೆ ಬೆಂಬಲಿಸಿ ಮತ್ತಷ್ಟು ಹಿಂದುಳಿದಿದ್ದೇವೆ. ಬಿಜೆಪಿಯ ಬಣ್ಣದ ಮಾತಿಗೆ ಮರುಳಾಗಿ, ಆತ್ಮಸಾಕ್ಷಿಗೆ ವಂಚನೆ ಮಾಡಿಕೊಂಡು ಬಿಜೆಪಿಗೆ ಮತ ನೀಡಿದ ಪರಿಣಾಮ ನಮ್ಮ ಸ್ಥಿತಿ ಇಂದು ಈ ಮಟ್ಟಕ್ಕೆ ಬಂದು ನಿಂತಿದೆ. ಬೆಲೆ ಹೆಚ್ಚಳದಿಂದ ಜನರು ತತ್ತರಿಸಿ ಹೋಗಿದ್ದಾರೆ. ರೂಪಾಯಿ ಮೌಲ್ಯ ಕುಸಿತ ಇನ್ನಿಲ್ಲದಂತೆ ಜನರನ್ನು ಕಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.


ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆರ್. ರಾಮಕೃಷ್ಣ ಮಾತನಾಡಿ, ದೇಶದಲ್ಲಿ ನಡೆಯುತ್ತಿರುವ ದುರಾಡಳಿತವನ್ನು ಜನತೆಯ ಮುಂದಿಡುವ ಕೆಲಸವನ್ನು ನಾವು ಮಾಡಬೇಕಾಗಿದೆ. ಜಿಎಸ್ಟಿ ಕಾಟದಿಂದ ಸಣ್ಣ, ಪಟ್ಟ ವ್ಯಾಪಾರಿಗಳು ತತ್ತರಿಸಿ ಹೋಗಿದ್ದಾರೆ. ಸಣ್ಣ ಪುಟ್ಟ ಜಾತಿಗಳು ರಾಜಕೀಯ ಅಧಿಕಾರ ಪಡೆದಿದ್ದರೆ ಅದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ. ಚಂದ್ರಶೇಖರಗೌಡ ಮಾತನಾಡಿ, ನಾನು ಕೂಡ ಐದು ವರ್ಷಗಳ ಕಾಲ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇಂದು ಜಿಲ್ಲಾಧ್ಯಕ್ಷನಾಗಿದ್ದೇನೆ. ತಾಳ್ಮೆ ಇದ್ದರೆ ಒಂದಲ್ಲ ಒಂದು ದಿನ ಅಧಿಕಾರ ಸಿಗುತ್ತದೆ. ಹಿಂದುಳಿದ ವರ್ಗಗಳ ಕೋಮು ಜನರೇ ಕಾಂಗ್ರೆಸ್‌ಗೆ ಶ್ರೀರಕ್ಷೆ. ಹಾಗಾಗಿ ಅವರಿಗೆ ಪಕ್ಷದ ಕಾರ್ಯಕ್ರಮಗಳು ತಲುಪುವಂತೆ ಮಾಡಬೇಕಾಗಿದೆ. ಆ ಮೂಲಕ ಪಕ್ಷವನ್ನು ಬಲಪಡಿಸುವ ಕೆಲಸ ಮಾಡಬೇಕೆಂದರು.

ವೇದಿಕೆಯಲ್ಲಿ ಮಾಜಿ ಶಾಸಕರಾದ ಡಾ. ರಫೀಕ್ ಅಹಮದ್, ಪ್ರಚಾರ ಸಮಿತಿ ಅಧ್ಯಕ್ಷರಾದ ಇಕ್ಬಾಲ್ ಅಹಮದ್, ಕೆಪಿಸಿಸಿ ಹಿರಿಯ ಉಪಾಧ್ಯಕ್ಷರಾದ ಮುರುಳೀಧರ ಹಾಲಪ್ಪ, ಡಿಸಿಸಿ ಹಿಂದುಳಿದ ವರ್ಗಗಳ ಅಧ್ಯಕ್ಷ ಅನಿಲ್, ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯೆ ನಾಗಮಣಿ, ಸೌಭಾಗ್ಯ, ಷಣ್ಮುಖಪ್ಪ, ರೇವಣ್ಣ ಸಿದ್ದಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕನಿಷ್ಠ ಕೂಲಿ, ಗುತ್ತಿಗೆ ಕಾರ್ಮಿಕರ ಖಾಯಂಮಾತಿ ಶಾಸನಕ್ಕೆ ಒತ್ತಾಯಿಸಿ ಶಾಸಕರಿಗೆ ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ



ಸಿಐಟಿಯು ರಾಜ್ಯ ಸಮಿತಿ ನೇತೃತ್ವದಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳ ರದ್ದತಿ, ತಡೆಹಿಡಿದ ಕನಿಷ್ಠ ವೇತನ ಜಾರಿ, ಗುತ್ತಿಗೆ–ಸ್ಕೀಮ್ ನೌಕರರ ಖಾಯಂಗೊಳಿಸುವಿಕೆ ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಸೆಪ್ಟೆಂಬರ್ 8ರಂದು 184 ಸಂಘಗಳ 25 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆ ನಡೆಸಿದರು. ಕಾರ್ಮಿಕ ಸಚಿವರು ಮನವಿ ಸ್ವೀಕರಿಸಿದ್ದರು. ಸೆಪ್ಟೆಂಬರ್ 15ರಂದು ಮುಖ್ಯಮಂತ್ರಿಗಳು ಮಾತುಕತೆಗೆ ಒಪ್ಪಿದ ನಂತರ ಹೋರಾಟ ಹಿಂಪಡೆಯಲಾಗಿತ್ತು. ಆದರೆ ಸಭೆ ನಡೆಸದೆ ಸರ್ಕಾರ ಮಾತು ಉಳಿಸಿಕೊಳ್ಳದಿರುವುದು ಖಂಡನೀಯ. ಹೀಗಾಗಿ ಸೆಪ್ಟೆಂಬರ್ 25ರಿಂದ ಶಾಸಕರು/ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ.

ಮುಖ್ಯಬೇಡಿಕೆಗಳು: ಒಂದು, ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ತಿದ್ದುಪಡಿ ತಂದು ರಾಜ್ಯದ ಕಾರ್ಮಿಕ ಹಿತಕ್ಕೆ ಅನುಗುಣವಾಗಿ ನಿಯಮ ರೂಪಿಸಬೇಕು. ಎರಡು, ಮೇ 22, 2026ರ ಕನಿಷ್ಠ ವೇತನ ಅಧಿಸೂಚನೆಯನ್ನು ತಡೆಹಿಡಿದು ಸಮಿತಿ ರಚಿಸಿರುವುದು ಕಾರ್ಮಿಕ ದ್ರೋಹ; 19 ಕೈಗಾರಿಕೆಗಳಿಗೆ ಅನ್ವಯವಾಗದಿರುವುದನ್ನು ಸರಿಪಡಿಸಿ, 2022ರಿಂದ ಪೂರ್ವಾನ್ವಯ ನೀಡಬೇಕು. ಮೂರು, ಅಂಗನವಾಡಿ, ಅಕ್ಷರದಾಸೋಹ, ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ಮತ್ತು ಕಾನೂನು ಸವಲತ್ತು ನೀಡಬೇಕು; ಭರವಸೆಯಂತೆ ಬಿಸಿಯೂಟ ರೂ.7,000, ಆಶಾ ರೂ.10,000, ಅಂಗನವಾಡಿ ರೂ.15,000 ನೀಡಬೇಕು. ನಾಲ್ಕು, ಇಎಸ್ಐ, ಇಪಿಎಫ್, ಗ್ರಾಚ್ಯುಟಿ, ಬೋನಸ್‌ಗಳ ವೇತನ ಮಿತಿಗಳನ್ನು ರದ್ದುಗೊಳಿಸಬೇಕು. ಐದು, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಇ–ಶ್ರಮ್ ಕಾರ್ಡುದಾರರಿಗೆ ಕಲ್ಯಾಣ ಯೋಜನೆ ಜಾರಿಗೊಳಿಸಬೇಕು. ಆರು, ಗುತ್ತಿಗೆ/ಹೊರಗುತ್ತಿಗೆ ಪದ್ಧತಿ ರದ್ದು ಮಾಡಿ, ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಕನ್ಫರ್ಮೆಂಟ್ ಆಫ್ ಪರ್ಮನೆಂಟ್ ಸ್ಟೇಟಸ್ ಕಾಯಿದೆ ಜಾರಿಗೆ ತರಬೇಕು. ಏಳು, ರೈತರ ಭೂ ಸ್ವಾಧೀನ ಕೈಬಿಟ್ಟು, ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಂಬಲ ಬೆಲೆ ನೀಡಬೇಕು. ಎಂಟು, ಆಹಾರ, ಆರೋಗ್ಯ, ಶಿಕ್ಷಣ, ವಿದ್ಯುತ್, ಸಾರಿಗೆ ಖಾಸಗೀಕರಣ ನಿಲ್ಲಿಸಿ, ವಸತಿ ರಹಿತ ಕಾರ್ಮಿಕರಿಗೆ ವಸತಿ, ಬಿಪಿಎಲ್ ಆದಾಯ ಮಿತಿ ಹೆಚ್ಚಿಸಬೇಕು. ಈ ವಿಷಯವನ್ನು ವಿಧಾನಸಭೆಯಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯಬೇಕು. ಸಿಐಟಿಯು ಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿ, ಕಾರ್ಮಿಕ ಸಚಿವರು ಹಾಗೂ ಅಧಿಕಾರಿಗಳ ಸಭೆ ಕೂಡಲೇ ನಿಗದಿಯಾಗದಿ ಮಾಡಲು ಸರ್ಕಾರಕ್ಕೆ ಒತ್ತಾಯಿಸಿ ಕಾರ್ಮಿಕರ ಹಕ್ಕು, ಭದ್ರತೆ ಮತ್ತು ಘನತೆ ರಕ್ಷಿಸುವುದು ನಿಮ್ಮ ಮತ್ತು ಸರ್ಕಾರದ ಜವಾಬ್ದಾರಿ ಎಂದು ಮನವಿ ಪತ್ರವನ್ನು ನೀಡಲಾಯಿತ್ತು. ಈ ಸಂಧರ್ಭದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರು ತುಮಕೂರು ಜಿಲ್ಲಾ ಅಧ್ಯಕ್ಷರಾದ ಸೈಯದ್ ಮುಜೀಬ್, ಜಿಲ್ಲಾಪ್ರಧಾನ ಕಾರ್ಯದರ್ಶಿ ಜಿ.ಕಮಲ, ಜಿಲ್ಲಾ ಖಜಾಂಚಿ ಲೋಕೇಶ್, ಜಿಲ್ಲಾಸಂಚಾಲಕರು ರಂಗಧಾಮಯ್ಯ, ಸುಜಿತ್ ನಾಯಕ, ಶಿವಕುಮಾರ ಸ್ವಾಮಿ, ಅಂಗನವಾಡಿ ನೌಕರರ ಸಂಘದ ಗೌರಮ್ಮ, ಜಬೀನ್ ಬಾನು, ವಿಶ್ವವಿದ್ಯಾನಿಲಯದ ಗುತ್ತಿಗೆಕಾರ್ಮಿಕ ಸದಸ್ಯರಾದ ಗೌರಮ್ಮ ಗಂಗಮ್ಮ ಹಮಾಲಿ ಕಾರ್ಮಿಕ ಸಂಘದ ನಾಗರಾಜು ರಾಮಾಂಜಿನಯ್ಯ, ಕಾಣಬಹುದು.

ಸಣ್ ಸುದ್ದಿ

ರಾಜ್ಯದಲ್ಲಿ 7,000 ಮಂದಿಗೆ HIV ಪಾಸಿಟಿವ್



ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ಆಸ್ಪತ್ರೆಗಳಲ್ಲಿ ಗುಣಮಟ್ಟದ ಸೇವೆ ಪಡೆಯಲು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಾಗಿದೆ ಎಂದು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಮೋಹನ್ ತಿಳಿಸಿದ್ದಾರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಸುರಕ್ಷಿತ ಗರ್ಭಪಾತ ಗಳ ಸೇವೆ ಎಚ್ಐವಿ ಕುರಿತು ವಿಶ್ವ ರೇಬಿಸ್ ಕುರಿತು ನಡೆದ ವಿಚಾರ ಸಂಕೀರ್ಣದಲ್ಲಿ ಮಾತನಾಡಿದ ಅವರು ಅನೈತಿಕ ಲೈಂಗಿಕ ಸಂಪರ್ಕ. ಸೋಂಕಿತರಿಂದ ರಕ್ತ ತೆಗೆದುಕೊಳ್ಳುವುದರಿಂದ ಎಚ್ಐವಿ ಬರುತ್ತದೆ ಎಂದರು.ಡಾ ರಮೇಶ್ ಮಾತನಾಡಿ ಎಚ್ಐವಿ ಕರ್ನಾಟಕದಲ್ಲಿ 3ನೇ ಸ್ಥಾನದಲ್ಲಿದೆ ಇನ್ನೊಂದು ಅಘಾತಕಾರಿ ಅಂಶವೆಂದರೆ ಕಳೆದ ಆರು ತಿಂಗಳಿಂದ ರಾಜ್ಯದಲ್ಲಿ 7,000 ಮಂದಿಗೆ ಎಚ್ಐವಿ ಪಾಸಿಟಿವ್ ಬಂದಿದೆ ಎಂದು ಅವರು ಹೆಚ್ಚಾಗಿ ಯುವಕ ಯುವತಿಯರಲ್ಲಿ ಎಚ್ಐವಿ ಕಾಣಿಸಿಕೊಳ್ಳುತ್ತಿದೆ ಈ ಹಿನ್ನೆಲೆಯಲ್ಲಿ 18 ರಿಂದ 25 ವರ್ಷದ ಒಳಗಿನ ಯುವಕ ಯುವತಿಯರಿಗೆ ಈ ಬಗ್ಗೆ ಅರಿವು ಮೂಡಿಸುವುದು. ನಮ್ಮಗಳ ಕರ್ತವ್ಯ ಎಂದರು.

ಡಾ. ಸವಿತಾ ಮಾತನಾಡಿ ಸೋಂಬೇರಿತನದ ಜೀವನದಿಂದ ಹೃದಯಘಾತ ಹೆಚ್ಚಾಗುತ್ತಿದೆ 16 ವರ್ಷದ ಮಕ್ಕಳಲ್ಲಿ ಹೃದಯ ಸ್ತಂಭನ ಕಂಡು ಬರುತ್ತಿದೆ ಯುವಕರು ಹೆಚ್ಚಾಗಿ ಚಟುವಟಿಕೆಯಿಂದ ಕೂಡಿರಬೇಕು ಎಂದು ತಿಳಿಸಿದರು. ಆರೋಗ್ಯ ಇಲಾಖೆಯ ಧರಣೇಶ್ ಗೌಡ ವಿಶ್ವರೇಬಿಸ್ ದಿವಸ ಅಂತರರಾಷ್ಟ್ರೀಯ ಸುರಕ್ಷಿತ ಗರ್ಭಪಾತಗಳ ಸೇವೆ ದಿವಸ ಹಾಗೂ ಹೆಚ್ ಐ ವಿ ಕುರಿತು ಮಾತನಾಡಿದರು ಈ ಸಂದರ್ಭದಲ್ಲಿ ಡಾ ತೇಜಸ್ವಿನಿ ಹಾಗೂ ವೈದ್ಯರುಗಳು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.



ತುಮಕೂರಿನ ಕಾಳಿದಾಸ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಇತ್ತೀಚೆಗೆ ಗುಬ್ಬಿಯಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ವಾಲಿಬಾಲ್ ನಲ್ಲಿ ಪ್ರಥಮ ಪ್ರಶಸ್ತಿ ಯನ್ನು ಪಡೆದು ಶಿವಮೊಗ್ಗದಲ್ಲಿ ನಡೆಯುವ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಈ ಪ್ರಶಸ್ತಿಯನ್ನು ತಂದು ಕೊಟ್ಟಿರುವುದಕ್ಕೆ ಜಿಲ್ಲಾ ಕಾಳಿದಾಸ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು. ನಿರ್ದೇಶಕರು, ಕಾಳಿದಾಸ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ಉಪಪ್ರಾಂಶುಪಾಲರು, ದೈಹಿಕ ಶಿಕ್ಷಕರು, ಶಾಲಾ ಆಡಳಿತ ಸಿಬ್ಬಂದಿ ವರ್ಗದವರನ್ನು ಶ್ಲಾಘಿಸಿದರು.

ಅ.1ರಂದು ವಿಶ್ವ ಹಿರಿಯನಾಗರಿಕರ ದಿನಾಚರಣೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ ಹಾಗೂ ಹಿರಿಯನಾಗರಿಕರಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 1ರಂದು ಬೆಳಗ್ಗೆ 9 ಗಂಟೆಗೆ ನಗರದ ಜಿಲ್ಲಾ ಬಾಲಭವನ ಸಭಾಂಗಣದಲ್ಲಿ "ವಿಶ್ವ ಹಿರಿಯನಾಗರಿಕರ ದಿನಾಚರಣೆ" ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ದೀಪ ಚೋಳನ್ ಉದ್ಘಾಟಿಸುವರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧ್ಯಕ್ಷತೆವಹಿಸಲಿದ್ದು, ವಿವಿಧ ಇಲಾಖೆಯ ಅಧಿಕಾರಿಗಳು, ಗಣ್ಯರು ಭಾಗವಹಿಸುವರು. ದಿನಾಚರಣೆ ಅಂಗವಾಗಿ ಅಂದು ಬೆಳಗ್ಗೆ 9 ಗಂಟೆಗೆ ನಗರದ ಎಂ.ಜಿ.ರಸ್ತೆ ಮುಖ್ಯದ್ವಾರದಿಂದ(ಗಾಯಿತ್ರಿ ಚಿತ್ರಮಂದಿರದ ಎದುರು) ಜಿಲ್ಲಾ ಬಾಲಭವನ ಆವರಣದವರೆಗೆ ವಾಕಥಾನ್ ಹಾಗೂ ಹೆಲ್ಪೇಜ್ ಇಂಡಿಯಾ ಸಂಸ್ಥೆ ಹಾಗೂ ನೇತ್ರದೀಪ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಹಿರಿಯನಾಗರಿಕರಿಗೆ ಆರೋಗ್ಯ ತಪಾಸಣೆ, ಕಣ್ಣಿನ ತಪಾಸಣೆ ಹಾಗೂ ಪೊರೆ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನಡೆಸಲಾಗುವುದು.ಜಿಲ್ಲೆಯ ಹಿರಿಯನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯನಾಗರಿಕರ ಕಲ್ಯಾಣಾಧಿಕಾರಿ ಶಿಲ್ಪ ಎಂ. ದೊಡ್ಡಮನಿ ತಿಳಿಸಿದ್ದಾರೆ.

ಕೃಷಿ ಹೊಂಡದಲ್ಲಿ ಸೋಡಿಯಂ ಸ್ಫೋಟ ಪ್ರಕರಣ 'ಡ್ರೋನ್ ಪ್ರತಾಪ್'ಗೆ ಹೈಕೋರ್ಟ್‌ನಿಂದ ಬಿಗ್ ರಿಲೀಫ್:



ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಜನಕಲೋಟಿ ಗ್ರಾಮದ ಕೃಷಿ ಹೊಂಡದಲ್ಲಿ ಸೋಡಿಯಂ ಮೆಟಲ್ ಎಸೆದು ಸ್ಫೋಟಿಸಿದ ಪ್ರಕರಣದಲ್ಲಿ, ಕನ್ನಡ ಬಿಗ್‌ಬಾಸ್ ಮಾಜಿ ಸ್ಪರ್ಧಿ 'ಡ್ರೋನ್ ಪ್ರತಾಪ್' ಅಲಿಯಾಸ್ ಪ್ರತಾಪ್‌ಗೆ ಕರ್ನಾಟಕ ಹೈಕೋರ್ಟ್ ಬಹುದೊಡ್ಡ ರಿಲೀಫ್ ನೀಡಿದೆ. ಅವರ ವಿರುದ್ಧ ದಾಖಲಾಗಿದ್ದ ಎಫ್ಐಆರ್ ಹಾಗೂ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ಸಂಪೂರ್ಣವಾಗಿ ರದ್ದುಗೊಳಿಸಿ ಆದೇಶಿಸಿದೆ. ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕಸದಸ್ಯ ಪೀಠವು, "ಪ್ರತಾಪ್ ನಡೆಸಿದ ಪ್ರಯೋಗದ ಉದ್ದೇಶ ಶೈಕ್ಷಣಿಕವಾಗಿದ್ದು, ಇದರಲ್ಲಿ ಯಾವುದೇ ರೀತಿಯ ದುರುದ್ದೇಶ ಅಥವಾ ಕ್ರಿಮಿನಲ್ ಉದ್ದೇಶ ಕಂಡುಬಂದಿಲ್ಲ" ಎಂದು ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ ಅವರ ಮೇಲಿದ್ದ ಎಫ್ಐಆರ್ ರದ್ದುಗೊಳಿಸಿ ಆದೇಶ ಹೊರಡಿಸಿದೆ.ಆದಾಗ್ಯೂ, ಭವಿಷ್ಯದಲ್ಲಿ ಇಂತಹ ಅಪಾಯಕಾರಿ ಪ್ರಯೋಗಗಳು ಪುನರಾವರ್ತನೆಯಾದರೆ ಅದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಎಂದು ಹೈಕೋರ್ಟ್ ಕಟ್ಟುನಿಟ್ಟಿನ ಎಚ್ಚರಿಕೆಯನ್ನೂ ನೀಡಿದೆ. ಜನಕಲೋಟಿ ಗ್ರಾಮದ ಕೃಷಿ ಹೊಂಡವೊಂದಕ್ಕೆ ಸೋಡಿಯಂ ಮೆಟಲ್ ಎಸೆದು ಸ್ಫೋಟಿಸಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

ಸಾರ್ವಜನಿಕ ಸ್ಥಳದಲ್ಲಿ ಅಪಾಯಕಾರಿ ರಾಸಾಯನಿಕ ಬಳಸಿ ಸ್ಫೋಟಿಸಿದ ಆರೋಪದ ಮೇಲೆ ಪ್ರತಾಪ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಅವರನ್ನು ಬಂಧಿಸಲಾಗಿತ್ತು, ಬಳಿಕ ಅವರು ಜಾಮೀನಿನ ಮೇಲೆ ಹೊರಬಂದಿದ್ದರು.ತೀರ್ಪು ಹೊರಬಿದ್ದ ಬೆನ್ನಲ್ಲೇ ಭಾವುಕರಾಗಿ ವಿಡಿಯೋ ಹಂಚಿಕೊಂಡ ಪ್ರತಾಪ್, ಕಣ್ಣೀರಿಡುತ್ತಲೇ ನ್ಯಾಯಾಲಯ ಮತ್ತು ತಮ್ಮ ವಕೀಲರ ತಂಡಕ್ಕೆ ಧನ್ಯವಾದ ಅರ್ಪಿಸಿದ್ದಾರೆ. ನನ್ನ ವಿರುದ್ಧ ಏನೇನೋ ಬರೆದರು, ಹೇಳಬಾರದ್ದನ್ನೆಲ್ಲ ಹೇಳಿದರು. ಕೊನೆಗೂ ದೇವರು ಕಣ್ಣುಬಿಟ್ಟಿದ್ದಾನೆ. ನ್ಯಾಯಾಲಯದಿಂದ ಪ್ರಕರಣ ಸಂಪೂರ್ಣ ರದ್ದಾಗಿದ್ದು ನಾನು ನಿರಪರಾಧಿ ಎಂದು ಸಾಬೀತಾಗಿದೆ. ಗೌರವಾನ್ವಿತ ಹೈಕೋರ್ಟ್‌ಗೆ ತಲೆಬಾಗಿ ನಮಸ್ಕರಿಸುತ್ತೇನೆ. ಇದು ಸತ್ಯಕ್ಕೆ ಸಿಕ್ಕ ಜಯ ಎಂದಿದ್ದಾರೆ.

ನನಗೆ ಕೇವಲ ತಂದೆಯಾಗಿರದೆ ಶಿಕ್ಷಕ . ಮಾರ್ಗದರ್ಶಿ. ಆದರ್ಶ ವ್ಯಕ್ತಿ ಯಾಗಿದ್ದವರು ಎನ್. ಬಸವಯ್ಯ

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ ;ಕುಟುಂಬ ನಿರ್ವಹಣೆ ಸೇರಿದಂತೆ ಜನಸೇವೆಯನ್ನೇ ತಮ್ಮ ಧ್ಯೇಯವಾಗಿಸಿಕೊಂಡು ಸಜ್ಜನ ರಾಜಕಾರಣಿಯೊಂದಿಗೆ ನನಗೆ ಕೇವಲ ತಂದೆಯಾಗಿರದೆ ಒಬ್ಬ ಗುರುವಿನ ಸ್ಥಾನದಲ್ಲಿದ್ದುಕೊಂಡು ಮಾರ್ಗದರ್ಶನ ಮಾಡುತ್ತ ನಮಗೆ ಇಂದಿಗೂ ಆದರ್ಶ ವ್ಯಕ್ತಿಯಾಗಿರುವ ಮಾಜಿ ಸಚಿವ ರಾದ ಎನ್. ಬಸವಯ್ಯನವರು ನಮಗೆ ಇಂದಿಗೂ ನಮ್ಮೊಂದಿಗೆ ಇದ್ದಾರೆ ಎಂದು ಶಾಸಕ ಸಿ. ಬಿ. ಸುರೇಶ್ ಬಾಬು ತಿಳಿಸಿದರು.

ಪಟ್ಟಣದ ಡಿವಿಪಿ ಶಾಲಾ ಆವರಣದಲ್ಲಿರುವ ಮಾಜಿ ಸಚಿವ ದಿ. ಎನ್ ಬಸವಯ್ಯ ನವರ 30ನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಸಮಾಧಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ನಮ್ಮ ಪ್ರತಿ ಕೆಲಸದಲ್ಲೂ ಜನಸೇವೆಯಲ್ಲೂ ನಾವು ನಮ್ಮ ತಂದೆಯವರನ್ನು ಕಾಣುತ್ತಿದ್ದೇವೆ ಅವರು ಹಾಕಿಕೊಟ್ಟ ಮಾರ್ಗದಲ್ಲೇ ನಡೆಯುತ್ತಿದ್ದೂ ಸಮಾಜದಲ್ಲಿರುವ ಎಲ್ಲರನ್ನೂ ಒಂದೇ ಸಮಾನವಾಗಿಕಾಣುತ್ತ ಸಮಾಜಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದವರು ನಮಗೆ ಅವರು ತಂದೆಯದರು ನಮಗೆ ಗುರುವಿನ ಸ್ಥಾನದಲ್ಲಿದ್ದು ಜೀವನದಲ್ಲಿ ಹೇಗೆ ಬದುಕ ಬೇಕೆಂದು ಕಳಿಸಿದರು ಅವರು ತಮ್ಮ ವಯಸ್ಸಿನವರೊಂದಿಗೆ ಹೇಗೆ ಸ್ನೇಹದಿಂದ ಇರುತ್ತಿದ್ರೋ ಅದೇ ರೀತಿ ಚಿಕ್ಕವರೊಂದಿಗೂ ಸ್ನೇಹದಿಂದ ಇರುತಿದ್ದರು ದೇವೇಗೌಡಅವರೊಂದಿಗೆ ನೀರನ್ನು ಬಿಟ್ಟರೆ ಜನತಾ ದಳಕ್ಕೆ ಸೇರುವುದಾಗಿ ಹೇಳಿ ಸೇರಿದ ಅವರು ಪಟ್ಟಣಕ್ಕೆ ನಿರುಹರಿಸಲು ಕಾರಣರಾದರೂ ಅಂದಿನಿಂದ ನಾವು ಜನತಾದಳದ ದೇವೇಗೌಡರ ಗರಡಿಯಲ್ಲಿದ್ದೇವೆ ನಮಗೆ ಇಂದು ನಮ್ಮ



ತಂದೆಯವರೇ ರಾಜಕೀಯಕ್ಕೆ. ಜನಸೇವೆ ಗೆ ಪ್ರೇರಣೆ ಎಂದರು. ಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿಂಗದ ಹಳ್ಳಿ ರಾಜಕುಮಾರ್ ಮಾತನಾಡಿ ಸಾಮಾಜಿಕ ನ್ಯಾಯದ ಹರಿಕಾರನಾಗಿ ಆನೆ ನಡೆದದ್ದೇ ದಾರಿ ಎಂಬಂತೆ ದಿ.ಎನ್.ಬಸವಯ್ಯನವರು ರಾಜಕೀಯ ನಡೆಸುತ್ತಿದ್ದರು. ಅವರ ರಾಜಕಾರಣವನ್ನು ನಾವು ಚಿಕ್ಕದಿನಿಂದ ನೋಡಿಕೊಂಡು ಬೆಳೆದವರು. ಅವರು ರಾಜಕಾರಣದಲ್ಲಿದ್ದಾಗ ಪುರಸಭೆ, ಪಿಎಲ್ ಡಿ ಬ್ಯಾಂಕ್, ಪಂಚಾಯ್ತಿಗಳು, ಟೌನ್ ಬ್ಯಾಂಕ್ ಎಲ್ಲವೂ ಅವರ ಸಂಪರ್ಕದಲ್ಲಿತ್ತು.ಬಸವಯ್ಯನವರು ಎಲ್ಲ ಸಮಾಜದ ಜಾತಿಯವರ ಜೊತೆ ಇದ್ದರು.ಎಂದಿಗೂ ಎಲ್ಲೇ ಹೋದರು ಮೊದಲು ಅವರು ಗಮನಿಸುತ್ತಿದ್ದದ್ದು ಬಡವರ ಮನೆಯೇ ಆಗಿತ್ತು ಅವರು ಪ್ರವಾಸ ಪ್ರಿಯರು ಸಹ ಆಗಿದ್ದರು. ಜನತೆ ನ್ಯಾಯ ತೀರ್ಮಾನಕ್ಕಾಗಿ ಕೋರ್ಟ್, ಕಛೇರಿಗೆ ಅಲೆಯುವುದನ್ನು ತಪ್ಪಿಸಿ ತಾವೇ ನ್ಯಾಯ ತೀರ್ಮಾನ ಮಾಡುತ್ತಿದ್ದರು ಎಷ್ಟೋ ಬಾರಿ ಕಾಲ್ನಡಿಗೆಯಲ್ಲೇ ಓಡಾಡುತ್ತಿದ್ದರು , ಲಿಂಗದೇವರು, ರಾಜಯ್ಯಶೆಟ್ಟರ ನಂತರ ಬಸವಯ್ಯನವರ ಕುಟುಂಬವೇ ರಾಜಕೀಯ ಚುನಾವಣಾ ಕ್ಷೇತ್ರದಲ್ಲಿ ಈವರೆಗೂ ಹೆಚ್ಚು ಇರುವುದು, ಬಸವಯ್ಯನವರು ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು,. ಎಂಎಬಸಪ್ಪ ಎಂಬ ಬಿರುದಿನಲ್ಲೇ ಜನರು ಕರೆಯುತ್ತಿದ್ದರು. ಬಸವಯ್ಯನವರ ಮರಣದ ನಂತರ ಸುರೇಶ್ ಬಾಬು ಚುನಾವಣಾ ಅಭ್ಯರ್ಥಿಯಾದರು ಎಂದರು.

ಮಾಜಿ ಪುರಸಭಾ ಸದಸ್ಯ ಸಿ.ಡಿ.ಸುರೇಶ್ ಮಾತನಾಡಿ, ಎನ್.ಬಸವಯ್ಯನವರು ಮಕ್ಕಳನ್ನು ನೋಡುತ್ತಿದ್ದಂತೆ ರಾಜಕಾರಣಕ್ಕಿಂತ ಯಜಮಾನರಂತೆ ಗುರುತಿಸಿಕೊಳ್ಳುತ್ತಿದ್ದರು. ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡುತ್ತಿದ್ದರು. ಈಗ ಆರಂಭಿಸಿರುವ ಸಿಇಟಿ, ನೀಟ್ ಯೋಚನೆ ಆಗಲೇ ಬಸವಯ್ಯನವರಿಗೆ ಬಂದಿತ್ತು ಎಂದರಲ್ಲದೆ, ಬಸವಯ್ಯನವರ ಹೆಸರಿನಲ್ಲಿ ಈಗಲೂ 50 ಸಾವಿರ ಮತಗಳಿವೆ, ಬಸವಯ್ಯನವರು ಬಡಬಗ್ಗರ ಹಲವಾರು ಜನರ ಮದುವೆ ಮಾಡಿಸಿದ್ದಾರೆ. ಅವರು ಹಾಕಿಕೊಟ್ಟ ದಾರಿಯಲ್ಲೇ ನಾವೆಲ್ಲ ನಡೆಯುತ್ತಿದ್ದೇವೆ ಎಂದರು.

ಕನ್ನಡ ಸಂಘದ ಅಧ್ಯಕ್ಷರಾದ ಸಿಬಿ ರೇಣುಕಾ ಸ್ವಾಮಿ ಮಾತನಾಡಿ ಅವರು ಹಳ್ಳಿಯ ಜನರು ರೈತರು ಕಾರ್ಮಿಕರು ಬಡವರು ಬಡವರಿಗೆ ಕಷ್ಟ ಎಂದರೆ ಸಾಕು ಅವರ ಮನೆಗೆ ಹೋಗಿ ಅವರ ಕಷ್ಟಗಳಿಗೆ ಭಾಗಿಯಾಗುತ್ತಿದ್ದರು ಅವರು ಇಲ್ಲಿನ 30 ವರ್ಷಗಳ ಹಿಂದೆ ದೈವ ದಿನರಾದಾಗ ಲಕ್ಷಾಂತರ ಜನ ಇಲ್ಲಿ ಬಂದು ಭಾಗವಹಿಸಿದ್ದು ಇದ್ದು ಅಷ್ಟೊಂದು ಅಭಿಮಾನಿಗಳಿದ್ದಾರೆ ಅದು ಇವತ್ತು ಸಹ ಎನ್ ಬಸವಯ್ಯ ಅಂದರೆ ಜಿಲ್ಲೆಗೆ ಒಂದು ಹೆಸರ ವಸಿ ಆದವರು ಶಾಸಕರಾಗಿ ಸಚಿವರಾಗಿ ತಾಲೂಕಿಗೆ ಒಳ್ಳೆಯ ಸೇವೆ ಸಲ್ಲಿಸಿದ್ದಾರೆ ಇಂದು ಅವರನ್ನು ಮರೆಯಲು ಸಾಧ್ಯವೇ ಇಲ್ಲ ತಾಲೂಕಿನಲ್ಲಿ ಯಾವುದೇ ಒಂದು ಕಾರ್ಯಕ್ರಮ ನಡೆದರೆ ಹಾಗೂ ನ್ಯಾಯ ಪಂಚಾಯಿತಿ ನಡೆದರು ಎನ್ ಬಸವಯ್ಯನವರ ಮನೆಗೆ ಬರುತ್ತಿದ್ದರು ಹಾಗೂ ಜನರ ಬಳಿಗೆ ಹೋಗಿ ಸಹ ಹಳ್ಳಿಗಳಿಗೆ ಹೋಗಿ ಜನರನ್ನು ಕೋರ್ಟು ಕಚೇರಿಗಳಿಗೆ ಹೋಗದಂತೆ ಅಲ್ಲಿಯೇ ನ್ಯಾಯ ತೀರ್ಮಾನ ಮಾಡಿ ಬಗೆಹರಿಸುತ್ತಿದ್ದರು ಬಡವರ ಪಾಲಿಗೆ ಬೆಂಬಲವಾಗಿ ನಿಲ್ಲುತ್ತಿದ್ದರು ಎಂದು ಮಾತನಾಡಿದರು ತಾ.ಕಸಾಪ ಅಧ್ಯಕ್ಷ ಎಂ.ಎಸ್.ರವಿಕುಮಾರ್ ಮಾತನಾಡಿ, ಬಸವಯ್ಯನವರು ಎಲ್ಲರ ಮನೆಯ ಒಳಗಡೆ ಇರುವಂತಹ ಯಜಮಾನರಾಗಿದ್ದರು. ಸಾಮಾಜಿಕ ನ್ಯಾಯ ಅಕ್ಷರಶಹ ಪಾಲನೆ ಮಾಡುತ್ತಿದ್ದವರು ಬಸವಯ್ಯನವರು, ಎಲ್ಲಾ ಮುಖಂಡರ ಜೊತೆ ಇದ್ದವರು ಬಸವಯ್ಯನವರು. ಎಲ್ಲಾ ತಳಸಮುದಾಯಗಳ ಜೊತೆ ಇದ್ದವರು ಬಸವಯ್ಯನವರು, ಉತ್ತಮ ರಾಜಕಾರಣಿಯಾಗಿದ್ದರು ಎಂದರು.

ಬಿಡದಿ, ತುಮಕೂರು, ಹೊಸಕೋಟೆ ಸೇರಿ 6 ಮಾರ್ಗಗಳಿಗೆ ಮೆಟ್ರೋ ವಿಸ್ತರಣೆ ಪ್ರಸ್ತಾವನೆ

ಸೂರ್ಯಪ್ರಗತಿನ್ಯೂಸ್.ಕಾಂ

:ಬೆಂಗಳೂರು: ನಮ್ಮ ಮೆಟ್ರೋ ಪ್ರಯಾಣಿಕರಿಗೆ ಮಹತ್ವದ ಸುದ್ದಿ ಸಿಕ್ಕಿದೆ. ಬೆಂಗಳೂರಿನ ಮೆಟ್ರೋ ಸಂಪರ್ಕವನ್ನು ನಗರದ ಹೊರವಲಯ ಹಾಗೂ ಸುತ್ತಮುತ್ತಲಿನ ಬೆಳವಣಿಗೆಯ ಪ್ರದೇಶಗಳಿಗೆ ವಿಸ್ತರಿಸುವ ನಿಟ್ಟಿನಲ್ಲಿ ಒಟ್ಟು 6 ಮಾರ್ಗಗಳ ವಿಸ್ತರಣೆಗೆ ಪ್ರಸ್ತಾವನೆ ರೂಪಿಸಲಾಗಿದೆ. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (BMRCL) ಹಲವು ಪ್ರಸ್ತಾವಿತ ಮಾರ್ಗಗಳ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿದೆ. ಕೆಲವು ಮಾರ್ಗಗಳು ಆಕಖ ಹಂತದಲ್ಲಿವೆ. ಯೋಜನೆಗಳು ಅಂತಿಮ ಅನುಮೋದನೆ ಪಡೆದು ಜಾರಿಗೆ ಬಂದರೆ ಬಿಡದಿ, ಹಾರೋಹಳ್ಳಿ, ಅತ್ತಿಬೆಲೆ, ತುಮಕೂರು ಮತ್ತು ಹೊಸಕೋಟೆಯಂತಹ ಪ್ರದೇಶಗಳಿಗೆ ಮೆಟ್ರೋ ಸಂಪರ್ಕ ವಿಸ್ತರಣೆಯಾಗಲಿದೆ.

ಯಾವೆಲ್ಲ ಮಾರ್ಗಗಳ ವಿಸ್ತರಣೆಗೆ ಪ್ರಸ್ತಾವನೆ?

1. ಚಲ್ಲಘಟ್ಟ–ಬಿಡದಿ:
ಸುಮಾರು 15 ಕಿ.ಮೀ ಉದ್ದದ ಮೆಟ್ರೋ ಮಾರ್ಗ ಪ್ರಸ್ತಾವಿಸಲಾಗಿದೆ. ಸದ್ಯ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವ ಹಂತದಲ್ಲಿದೆ.

2. ಸಿಲ್ಕ್ ಇನ್‌ಸ್ಟಿಟ್ಯೂಟ್–ಹಾರೋಹಳ್ಳಿ:
ಸುಮಾರು 24 ಕಿ.ಮೀ ಉದ್ದದ ಮಾರ್ಗದ ಪ್ರಸ್ತಾವನೆ ಇದ್ದು, ಕಾರ್ಯಸಾಧ್ಯತಾ ವರದಿ ಹಂತದಲ್ಲಿದೆ.

3. ಬೊಮ್ಮಸಂದ್ರ–ಅತ್ತಿಬೆಲೆ:ಸುಮಾರು 11 ಕಿ.ಮೀ ಉದ್ದದ ಈ ಮಾರ್ಗಕ್ಕೂ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗುತ್ತಿದೆ. ಈ ವಿಸ್ತರಣೆ ಜಾರಿಗೆ ಬಂದರೆ ಕೈಗಾರಿಕಾ ಪ್ರದೇಶಗಳಿಗೆ ಸಂಪರ್ಕ ಹೆಚ್ಚಾಗುವ ನಿರೀಕ್ಷೆಯಿದೆ.

4. ಕಾಳೇನ ಅಗ್ರಹಾರ–ಕಾಡುಗೋಡಿ ಟ್ರೀ ಪಾರ್ಕ್:
ಸುಮಾರು 68 ಕಿ.ಮೀ ಉದ್ದದ ಈ ಮಾರ್ಗ ಪ್ರಸ್ತಾವಿತ ವಿಸ್ತರಣೆಗಳ ಪೈಕಿ ಅತಿ ಉದ್ದದ ಮಾರ್ಗವಾಗಿದೆ. ಸದ್ಯ ಇದು ಕಾರ್ಯಸಾಧ್ಯತಾ ವರದಿ ಹಂತದಲ್ಲಿದೆ.

5. ಮಾದವರ–ತುಮಕೂರು:
ಸುಮಾರು 60 ಕಿ.ಮೀ ಉದ್ದದ ಮೆಟ್ರೋ ಸಂಪರ್ಕದ ಪ್ರಸ್ತಾವನೆ ಇದ್ದು, ಸದ್ಯ ಆಕಖ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿದೆ.

6. ಕೆ.ಆರ್.ಪುರಂ–ಹೊಸಕೋಟೆ:
ಬೂದಿಗೆರೆ ಕ್ರಾಸ್ ಮೂಲಕ ಹೊಸಕೋಟೆಗೆ ಸಂಪರ್ಕ ಕಲ್ಪಿಸುವ ಸುಮಾರು 16 ಕಿ.ಮೀ ಉದ್ದದ ಮಾರ್ಗವನ್ನು ಪ್ರಸ್ತಾವಿಸಲಾಗಿದೆ. ಸದ್ಯ ಕಾರ್ಯಸಾಧ್ಯತಾ ವರದಿ ಹಂತದಲ್ಲಿದೆ.



ಹೊರವಲಯದ ಜನರಿಗೆ ದೊಡ್ಡ ಅನುಕೂಲ

ಈ ಪ್ರಸ್ತಾವಿತ ಮಾರ್ಗಗಳು ಅನುಮೋದನೆ ಪಡೆದು ಕಾರ್ಯರೂಪಕ್ಕೆ ಬಂದರೆ ಬೆಂಗಳೂರಿನ ಹೊರವಲಯದ ಹಲವು ಪ್ರದೇಶಗಳಿಗೆ ಮೆಟ್ರೋ ಸಂಪರ್ಕ ಹೆಚ್ಚಾಗಲಿದೆ. ಅದರಲ್ಲೂ ಸ್ಯಾಟಲೈಟ್ ಪಟ್ಟಣಗಳು, ಕೈಗಾರಿಕಾ ವಲಯಗಳು ಹಾಗೂ ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಕಾರಿಡಾರ್‌ಗಳಿಗೆ ಹೆಚ್ಚಿನ ಅನುಕೂಲವಾಗುವ ನಿರೀಕ್ಷೆಯಿದೆ. ಬಿಡದಿ, ಹಾರೋಹಳ್ಳಿ, ಅತ್ತಿಬೆಲೆ, ಹೊಸಕೋಟೆ ಹಾಗೂ ತುಮಕೂರಿನಂತಹ ಪ್ರದೇಶಗಳಿಂದ ಬೆಂಗಳೂರಿಗೆ ಪ್ರತಿನಿತ್ಯ ಸಂಚರಿಸುವ ಪ್ರಯಾಣಿಕರಿಗೆ ಪರ್ಯಾಯ ಸಾರ್ವಜನಿಕ ಸಾರಿಗೆ ವ್ಯವಸ್ಥೆ ದೊರೆಯಬಹುದು.

ಟ್ರಾಫಿಕ್ ಕಡಿಮೆ ಮಾಡಲು ಸಹಕಾರಿ

ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ವಾಹನ ದಟ್ಟಣೆ ದೊಡ್ಡ ಸಮಸ್ಯೆಯಾಗಿದೆ. ಮೆಟ್ರೋ ಜಾಲವನ್ನು ಹೊರವಲಯದವರೆಗೆ ವಿಸ್ತರಿಸಿದರೆ ಖಾಸಗಿ ವಾಹನಗಳ ಅವಲಂಬನೆ ಕಡಿಮೆಯಾಗುವುದರ ಜೊತೆಗೆ ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ತಗ್ಗಿಸಲು ಸಹಕಾರಿಯಾಗುವ ನಿರೀಕ್ಷೆಯಿದೆ.

ಉದ್ಯೋಗ, ಶಿಕ್ಷಣ ಮತ್ತು ಕೈಗಾರಿಕಾ ಕೇಂದ್ರಗಳಿಗೆ ಸುಲಭ ಸಂಪರ್ಕ ಕಲ್ಪಿಸುವುದರ ಜೊತೆಗೆ ಈಗಿರುವ ನಮ್ಮ ಮೆಟ್ರೋ ಜಾಲ ಹಾಗೂ ಭವಿಷ್ಯದ ಮಾರ್ಗಗಳನ್ನು ಪರಸ್ಪರ ಸಂಪರ್ಕಿಸುವುದಕ್ಕೂ ಈ ವಿಸ್ತರಣೆಗಳು ನೆರವಾಗುಹುದು. ಆದರೆ ಈ ಮಾರ್ಗಗಳು ಸದ್ಯ ಪ್ರಸ್ತಾವನೆ, ಕಾರ್ಯಸಾಧ್ಯತಾ ಅಧ್ಯಯನ ಅಥವಾ ಆಕಖ ಹಂತದಲ್ಲಿದ್ದು, ಅಂತಿಮ ಅನುಮೋದನೆ, ಹಣಕಾಸು ಹಾಗೂ ಕಾಮಗಾರಿ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕವೇ ಯೋಜನೆಗಳ ಸ್ಪಷ್ಟ ಚಿತ್ರಣ ಸಿಗಲಿದೆ.

ಕ್ಷಯ ನಿಯಂತ್ರಣಕ್ಕೆ ಸೂಚನೆ – ಮೂಲಸೌಕರ್ಯ ಕೊರತೆ ನೀಗಿಸಲು ತಮಟೆ ಕೂಲಿ ಕಾರ್ಮಿಕರ ಸಂಘದಿಂದ ದೂರು

ವರದಿ: ಎನ್ ನರಸಿಂಹಪ್ಪ,

ಪಾವಗಡ, (ಸೂರ್ಯ ಪ್ರಗತಿ): ಪಾವಗಡ ತಾಲೂಕಿನ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕ್ಷಯ ವಿಭಾಗದ ಸಹಾಯಕ ನಿರ್ದೇಶಕ ಡಾ. ಅನಿಲ್ ಅವರು ಇಂದು ಭೇಟಿ ನೀಡಿ ಕ್ಷಯ ರೋಗ ನಿಯಂತ್ರಣ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿದರು.

ಈ ವೇಳೆ ರೋಗಿಗಳಿಗೆ ನೀಡಲಾಗುತ್ತಿರುವ ಚಿಕಿತ್ಸೆ, ಲ್ಯಾಬ್ ಪರೀಕ್ಷೆ, ಮಾತ್ರೆ ವಿತರಣೆ ವ್ಯವಸ್ಥೆಯ ಬಗ್ಗೆ ಖುದ್ದು ರೋಗಿಗಳಿಂದಲೇ ಮಾಹಿತಿ ಪಡೆದ ಡಾ. ಅನಿಲ್ ಅವರು, ಆಸ್ಪತ್ರೆಗಳಲ್ಲಿನ ಔಷಧಿ ದಾಸ್ತಾನು, ಲ್ಯಾಬ್ ಪರೀಕ್ಷಾ ವರದಿಗಳು ಮತ್ತು ಅನುಸರಣಾ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿದರು. ನಂತರ ತಾಲೂಕು ವೈದ್ಯಾಧಿಕಾರಿ ಡಾ. ನಾಗೇಶ್ ನಾಯ್ಕ ಅವರಿಗೆ ಸೂಚನೆ ನೀಡಿ, ಕ್ಷಯ ರೋಗವನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಸರ್ಕಾರದ ಮಾರ್ಗಸೂಚಿಯಂತೆ ಎಲ್ಲ ರೋಗಿಗಳಿಗೆ ನಿಯಮಿತವಾಗಿ ಮಾತ್ರೆ ವಿತರಿಸಿ ನಿಗಾ ವಹಿಸುವಂತೆ ಸೂಚಿಸಿದರು.ಅವ್ಯವಸ್ಥೆ



ವಿರುದ್ಧ ತಮಟೆ ಸಂಘದಿಂದ ದೂರುಡಾ. ಅನಿಲ್ ಅವರ ಪರಿಶೀಲನೆ ವೇಳೆಯೇ ತಮಟೆ ಕೂಲಿ ಕಾರ್ಮಿಕರ ಸಂಘ, ವತಿಯಿಂದ ಆಸ್ಪತ್ರೆಯ ಅವ್ಯವಸ್ಥೆಯ ಬಗ್ಗೆ ದೂರು ಸಲ್ಲಿಸಲಾಯಿತು. ದಿನಾಂಕ 29/09/2026ರಂದು ತಾಲೂಕು ವೈದ್ಯಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಈ ಕೆಳಗಿನ ಗಂಭೀರ ಆರೋಪಗಳನ್ನು ಮಾಡಲಾಗಿದೆ: "ಪಾವಗಡ ತಾಲೂಕಿನಲ್ಲಿ ಸುಮಾರು 2,10,000 ಜನಸಂಖ್ಯೆ ಇದ್ದು, ಇಲ್ಲಿನ ಜನ ಬಹುತೇಕ ಕೂಲಿ ಕಾರ್ಮಿಕರಾಗಿದ್ದಾರೆ. ಅತೀ ಹೆಚ್ಚು ಫ್ಲೋರೈಡ್ ಯುಕ್ತ ನೀರಿನಿಂದ ಅನೇಕ ಖಾಯಿಲೆಗಳಿಂದ ನರಳುತ್ತಿದ್ದಾರೆ. 60 ತಾಯಿ–ಮಕ್ಕಳ ವಾರ್ಡ್, 100 ಜನರಲ್ ವಾರ್ಡ್ ಇದ್ದರೂ ರೋಗಿಗಳಿಗೆ ಇಲ್ಲಿ ಹೆಚ್ಚಿನ ಚಿಕಿತ್ಸೆ ದೊರೆಯುತ್ತಿಲ್ಲ. ಇಅಉ ಮಿಷಿನ್, ಃಕ ಮಾನಿಟರ್ 2 ಇದ್ದು ಬಾಣಂತಿಯರ ವಾರ್ಡಿನಲ್ಲಿ ಃಕ ಮಾನಿಟರ್ ಇರುವುದಿಲ್ಲ. ಆಪರೇಷನ್ ಥಿಯೇಟರಿನಲ್ಲಿ ಃಕ ಮಾನಿಟರ್ ಇರುವುದಿಲ್ಲ. ಅಂಬುಲೆನ್ಸ್ 3 ವಾಹನಗಳಿದ್ದು ಸರಿಯಾದ ಸಮಯಕ್ಕೆ ಸಿಗುವುದಿಲ್ಲ. ಒಂದು ಅಂಬುಲೆನ್ಸ್ ಅಪಘಾತಕ್ಕೀಡಾಗಿ 3 ತಿಂಗಳು ಆದರೂ ಖಿಊಔ ಮತ್ತು ಒಒಔ ಗಮನ ಕೊಟ್ಟಿಲ್ಲ. ಶೌಚಾಲಯಗಳಿಗೆ ನೀರಿನ ವ್ಯವಸ್ಥೆ ಇರುವುದಿಲ್ಲ, ತಾಯಿ–ಮಕ್ಕಳ ವಾರ್ಡಿನಲ್ಲಿ ಸ್ವಚ್ಛತೆ ಇರುವುದಿಲ್ಲ. ಅಪಘಾತ ವಿಭಾಗದಲ್ಲಿ ಸರಿಯಾದ ಚಿಕಿತ್ಸೆ ಸಿಗುವುದಿಲ್ಲ." ಸಮಸ್ಯೆ ಬಗೆಹರಿಸದಿದ್ದರೆ ದೊಡ್ಡಮಟ್ಟದ ಹೋರಾಟ ನಡೆಸುವುದಾಗಿ ಸಂಘ ಎಚ್ಚರಿಕೆ ನೀಡಿದೆ. ಮನವಿಗೆ ತಾಲೂಕು ಆರೋಗ್ಯಾಧಿಕಾರಿಗಳು ಸಹಿ ಹಾಕಿ ಸ್ವೀಕರಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷಿ

ವಡ್ಡರಹಳ್ಳಿ ಬಡ ಕುಟುಂಬಕ್ಕೆ ವಾತ್ಸಲ್ಯ ಮನೆ ಹಸ್ತಾಂತರ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಮನೆ ಇಲ್ಲದೆ ನಿರಾಶ್ರಿತರಾಗಿದ್ದ ತುಮಕೂರು ತಾಲ್ಲೂಕು ಹೊನ್ನಡಿಕೆ ಹ್ಯಾಂಡ್ ಪೋಸ್ಟ್ ಸಮೀಪದ ವಡ್ಡರಹಳ್ಳಿಯ ಬಡ ಕುಟುಂಬಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಿಸಿ ಫಲಾನುಭವಿ ಕುಟುಂಬಕ್ಕೆ ಹಸ್ತಾಂತರಿಸಲಾಯಿತು. ನಿರಾಶ್ರಿತರಿಗೆ ಮನೆ ನೀಡಬೇಕೆಂಬ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಮಹತ್ವಾಕಾಂಕ್ಷೆಯ ವಾತ್ಸಲ್ಯ ಯೋಜನೆಯಡಿ ಮನೆ ಕಟ್ಟಿಸಿ ವಡ್ಡರಹಳ್ಳಿಯ ಗಂಗಮ್ಮ, ಸೂಲಯ್ಯ ದಂಪತಿಗೆ ನೂತನ ಮನೆ ಹಸ್ತಾಂತರಿಸಿ ಮಾತನಾಡಿದ ಧರ್ಮಸ್ಥಳ ಸಂಸ್ಥೆ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ ಅವರು, ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಬರುವ ವಾತ್ಸಲ್ಯ ಕಾರ್ಯಕ್ರಮದಲ್ಲಿ ನಿರ್ಗತಿಕರಿಗೆ ಪ್ರತಿ ತಿಂಗಳು



ಮಾಸಾಶನ ಮತ್ತು ಸೂರು ಇಲ್ಲದವರಿಗೆ ಮನೆ ನಿರ್ಮಾಣ ಮಾಡಿ ಹಸ್ತಾಂತರಿಸುವ ಕಾರ್ಯವನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ ಎಂದು ಹೇಳಿದರು. ಧರ್ಮಸ್ಥಳ ಸಂಸ್ಥೆ ಯೋಜನೆಯ ಅನ್ನದಾನ, ವಿದ್ಯಾದಾನ, ಔಷಧ ದಾನ ಮತ್ತು ಅಭಯದಾನ ಎಂಬ ಚತುರ್ದಾನಗಳ ಬಗ್ಗೆ ಮಾಹಿತಿ ನೀಡಿದ ಅವರು, ನಿರ್ಗತಿಕರು ನಿರಾಶರಾಗುವುದು ಬೇಡ, ನಿಮ್ಮ ನೆರವಿಗೆ ಧರ್ಮಸ್ಥಳ ಸಂಸ್ಥೆ ಇದೆ ಎಂಬ ಅಭಯ ನೀಡಿದರು.

ಜನಜಾಗೃತಿ ವೇದಿಕೆ ಅಧ್ಯಕ್ಷ ಆರ್. ಕಾಮರಾಜ್ ಮಾತನಾಡಿ, ಸರ್ಕಾರ ಮಾಡಲು ಸಾಧ್ಯವಾಗದ ಎಷ್ಟೋ ಕೆಲಸಗಳನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಾ ಬರುತ್ತಿದೆ. ಇಂತಹ ಸಮಾಜಮುಖಿ, ಸೇವಾ ಕಾರ್ಯಕ್ರಮಗಳು ಬಡವರಿಗೆ ನಿರ್ಗತಿಕರಿಗೆ ಆಸರೆ ಆಗಿವೆ. ಧರ್ಮಸ್ಥಳ ಸಂಸ್ಥೆಯ ಸೇವಾಕಾರ್ಯಗಳು ಮುಂದುವರೆದು ಹೆಚ್ಚು ಜನ ಬಡವರಿಗೆ ಸಹಾಯವಾಗಲಿ ಎಂದು ಆಶಿಸಿದರು.

ಸಂಸ್ಥೆಯ ಯೋಜನಾಧಿಕಾರಿ ಪ್ರಭಾಕರ್ ರಾಮ್ ನಾಯಕ್, ಹೊಳಕಲ್ಲು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಎ.ಹೆಚ್. ಆಂಜಿನಪ್ಪ, ಮಾಜಿ ಸದಸ್ಯರಾದ ಶ್ರೀನಿವಾಸ್, ನಾರಾಯಣ, ಜ್ಞಾನವಿಕಾಸ ಸಮನ್ವಯಾಧಿಕಾರಿ ರೇಖಾ, ವಲಯದ ಮೇಲ್ವಿಚಾರಕಿ ತನುಜಾ, ಸೇವಾಪ್ರತಿನಿಧಿ ಹೇಮಾ ಸೇರಿದಂತೆ ಗ್ರಾಮದ ಮುಖಂಡರು, ಸಂಘದ ಸದಸ್ಯರು ಭಾಗವಹಿಸಿದ್ದರು.

ಬೀದಿಬದಿ ವ್ಯಾಪಾರಿಗಳಿಗೆ ಜಾಗ ಕೊಡಿ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಗರದ ಬೀದಿಬದಿ ವ್ಯಾಪಾರಿಗಳಿಗೆ ಪರ್ಯಾಯ ಜಾಗ ಸಿಗುವವರೆಗೂ ಅವರು ಈ ಮೊದಲು ವ್ಯಾಪಾರ ಮಾಡುತ್ತಿದ್ದ ಜಾಗದಲ್ಲೇ ವ್ಯಾಪಾರ ಮಾಡಿಕೊಂಡು ಹೋಗಲು ಅವಕಾಶ ನೀಡುವಂತೆ ಕೋರಿ ಶ್ರಮಜೀವಿ ಬೀದಿ ಬದಿ ವ್ಯಾಪಾರಿಗಳ ಸಂಘದರಾಜ್ಯಾಧ್ಯಕ್ಷ ಎಂ. ಗೋಪಿ ಶಾಸಕ ಜಿ.ಬಿ. ಜ್ಯೋತಿಗಣೇಶ್‌ಅವರಿಗೆ ಮನವಿಪತ್ರ ಸಲ್ಲಿಸಿದರು. ಸುಪ್ರೀಂ ಕೋರ್ಟ್ ಆದೇಶದನ್ವಯ ನಗರಪಾಲಿಕೆ ಅಧಿಕಾರಿಗಳ ನಗರದ ಬೀದಿ ಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಿಸಿದ್ದಾರೆ. ಇದರಿಂದ ಈ ವ್ಯಾಪಾರಿಗಳಿಗೆ ಜೀವನ ನಿರ್ವಹಣೆ ತೊಂದರೆಯಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಾಲಿಕೆ ಅಧಿಕರಿಗಳು ಶೇಕಡ 25ರಷ್ಟು ಜನ ವ್ಯಾಪಾರಿಗಳಿಗೆ ಸೀಮಿತವಾದ ಜಾಗದಲ್ಲಿ ವ್ಯಾಪಾರ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಉಳಿದವರಿಗೆ ಅವಕಾಶವಿಲ್ಲ ಎಂದು ಹೇಳಿದರು. ಉಳಿದ ವ್ಯಾಪಾರಿಗಳಿಗೆ ಜಾಗಕೊಡುವವರೆಗೂ ಅವರು ವ್ಯಾಪಾರ ಮಾಡುತ್ತಿರುವ ಜಾಗದಲ್ಲೇ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿಕೊಡಬೇಕು ನಂತರ ಸ್ಥಳಾಂತರಿಸಬಹುದು ಎಂದು ಎಂ.ಗೋಪಿ ಮನವಿ ಮಾಡಿದರು.

ಶ್ರೀ ಸಿದ್ಧಾರ್ಥ ವ್ಯವಹಾರ ನಿರ್ವಹಣಾ ಸಂಸ್ಥೆ ಹಾಗೂ ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ

ವಿಶ್ವ ಹೃದಯ ದಿನಾಚರಣೆ; ಸಿಪಿಆರ್ (CPR) ಕುರಿತಾದ ಅರಿವು ಮತ್ತು ಪ್ರಾಯೋಗಿಕ ಪ್ರಾತ್ಯಕ್ಷಿಕೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ವಿಶ್ವಹೃದಯ ದಿನ ಪ್ರಯುಕ್ತ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಕಾರ್ಡಿಯೋಥೊರಾಸಿಕ್ ಮತ್ತು ಶ್ರೀ ಸಿದ್ಧಾರ್ಥ ವ್ಯವಹಾರ ನಿರ್ವಹಣಾ ಸಂಸ್ಥೆ ಹಾಗೂ ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ ಜಂಟಿಯಾಗಿ ಸಿಪಿಆರ್ (CPR) ಕುರಿತಾದ ಅರಿವು ಮತ್ತು ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ವಿಶ್ವ ಹೃದಯ ದಿನ ಪ್ರಯುಕ್ತ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಕಾರ್ಡಿಯೋಥೊರಾಸಿಕ್ ಮುಖ್ಯಸ್ಥರಾದ ಡಾ. ತಮೀಮ್ ಅಹ್ಮದ್ ಮತ್ತು ಅವರ ತಂಡ 'ಹಾರ್ಟ್ ಸೇಫ್ ತುಮಕೂರು' ಅಭಿಯಾನದಡಿ ಸಿಪಿಆರ್ (CPR) ಕುರಿತು ಜಾಗೃತಿ ಮೂಡಿಸಲು ಪ್ರಾಯೋಗಿಕ ಪ್ರಾತ್ಯಕ್ಷಿಕೆಯನ್ನು ನೀಡಿದರು.

ಡಮ್ಮಿ (Mannequin) ಮಾದರಿಯನ್ನು ಬಳಸಿ ಎದೆಯ ಭಾಗದಲ್ಲಿ ಸರಿಯಾದ ರೀತಿಯಲ್ಲಿ ಪ್ರೆಶರ್ ನೀಡಿ ಜೀವರಕ್ಷಣೆ ಮಾಡುವ ಸಿಪಿಆರ್ ವಿಧಾನವನ್ನು ಪ್ರದರ್ಶಿಸುವ ಮೂಲಕ ಜಾಗೃತಿ ಪ್ರಾಯೋಗಿಕ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ



ಕಾರ್ಡಿಯೋಥೊರಾಸಿಕ್ ಮುಖ್ಯಸ್ಥರಾದ ಡಾ. ತಮೀಮ್ ಅಹ್ಮದ್ ಅವರು ಮಾತನಾಡಿ, ಇತ್ತೀಚೆಗೆ ಹೆಚ್ಚಿನವರು ಹೃದಯಾಘಾತದಿಂದ ಸಾಯುತ್ತಿದ್ದಾರೆ. ಯುವಕರು ಕೂಡಾ ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆ, ಹೀಗಿರುವಾಗ ಅದನ್ನು ತಡೆಗಟ್ಟಲು ಪ್ರತಿಯೊಬ್ಬರೂ ಸಿಪಿಆರ್ ಬಗ್ಗೆ ಕಲಿಯುವುದು ಬಹಳ ಮುಖ್ಯ. ಯಾರಿಗೆ ಯಾವ ಸಂದರ್ಭದಲ್ಲಿ ಹೃದಯಾಘಾತವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕನಿಷ್ಠ ಪಕ್ಷ ಸಿಪಿಆರ್ ಮಾಡಿಕೊಳ್ಳುವುದು ಹೇಗೆ ಎಂದು ತಿಳಿದಿದ್ದರೆ ಕನಿಷ್ಟು ಒಂದು ಜೀವವನ್ನು ಉಳಿಸಬಹುದು.ಒಂದು ತಿಂಗಳ ಕಾಲ ಹೃದಯ ಸುರಕ್ಷಿತ ತುಮಕೂರು ಎಂಬ ಸಿಪಿಆರ್ ಜಾಗೃತಿ ಅಭಿಯಾನ ಕೈಗೊಳ್ಳುತ್ತಿದ್ದು, ಜಿಲ್ಲೆಯ ಸಾರ್ವಜನಿಕ ಸ್ಥಳಗಳು, ಶಾಲಾ, ಕಾಲೇಜುಗಳಲ್ಲಿ ಉಚಿತವಾಗಿ ಸಿಪಿಆರ್ ತರಬೇತಿ ನೀಡಲಾಗುತ್ತಿದೆ. ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಜನರು (ಜೆನ್ ಜಿ) ಈ ಜೀವ ರಕ್ಷಣೆಯ ಕೌಶಲ್ಯವನ್ನು ಕಲಿಯುವುದು ಅತ್ಯಂತ ಮುಖ್ಯ ಎಂದರು.

ಅಪಘಾತ ಅಥವಾ ಯಾವುದೇ ತುರ್ತು ಸಂದರ್ಭದಲ್ಲಿ ಎದುರಾದರೂ ಕೊನೆಯಲ್ಲಿ ಜೀವ ಹೋಗುವುದು ಹೃದಯ ಸ್ತಂಭನದಿಂದ. ಹಠಾತ್ ಹೃದಯಾಘಾತವಾದಾಗ ಹೃದಯ ಸಂಪೂರ್ಣವಾಗಿ ಬ್ಲಾಕ್ ಆಗಿ ಹಾನಿಗೊಳಗಾಗುತ್ತದೆ. ಆಸ್ಪತ್ರೆಗೆ ತಲುಪುವ ಮುನ್ನ ಸಿಪಿಆರ್ ಪ್ರಮುಖ ತುರ್ತು ಸಮಯದಲ್ಲಿ ಆಸ್ಪತ್ರೆ ತಲುಪಲು ಸಮಯ ಬೇಕಾಗುಹುದು. ಆದರೆ ತಕ್ಷಣವೇ ನೀಡುವ ಸಿಪಿಆರ್ ಪ್ರಕ್ರಿಯೆಯು ವ್ಯಕ್ತಿಯ ಜೀವ ಉಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ ಎಂದು ಅವರು ತಿಳಿಸಿದರು. ತುಮಕೂರು ಜಿಲ್ಲಾಡಳಿತ ವತಿಯಿಂದ ಜಿಲ್ಲೆಯಾದ್ಯಂತ ಜನರಿಗೆ ನೇರವಾಗಿ ಸಿಪಿಆರ್ (CPR) ಕುರಿತಾದ ಅರಿವು ಮತ್ತು ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳನ್ನು ತಲುಪಿಸುವ ಉದ್ದೇಶದಿಂದ ರೂಪಿಸಲಾದ 'ಹಾರ್ಟ್ ಸೇಫ್ ತುಮಕೂರು' (Heart Safe Tumkur) ಎಂಬ ಘೋಷಣೆಯೊಂದಿಗೆ ಮಾಸಿಕ ಸಾರ್ವಜನಿಕ ಆರೋಗ್ಯ ಅಭಿಯಾನಕ್ಕೆ ಸಾಹೇ ವಿಶ್ವವಿದ್ಯಾನಿಲಯದ ಕುಲಾಧಿಪತಿ ಹಾಗೂ ಕರ್ನಾಟಕ ಸರ್ಕಾರದ ಉಪಮುಖ್ಯಮಂತ್ರಿಡಾ.ಜಿ. ಪರಮೇಶ್ವರ ಅವರು ಇತ್ತೀಚೆಗೆ ಚಾಲನೆ ನೀಡಿದರು. ಅದರ ಅಂಗವಾಗಿ ಸಿಪಿಆರ್ (CPR) ಕುರಿತಾದ ಅರಿವು ಮತ್ತು ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳನ್ನು ನೀಡಲಾಗುತ್ತಿದೆ ಎಂದರು.

ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಕಾರ್ಡಿಯೋಥೊರಾಸಿಕ್‌ನ ವೈದ್ಯರ ತಂಡ, ಶ್ರೀ ಸಿದ್ಧಾರ್ಥ ವ್ಯವಹಾರ ನಿರ್ವಹಣಾ ಸಂಸ್ಥೆಯ ಪ್ರಾಂಶುಪಾಲರಾದ ಡಾ.ಮಮತ, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಬಿ.ಟಿ. ಮುದ್ದೇಶ್, ಎಲ್ಲಾ ವಿಭಾಗಗಳ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರೈತ ಸಂಘದಿಂದ ಸರ್ಕಾರದ ವಿರುದ್ಧ ಶವಯಾತ್ರೆ ಪ್ರತಿಭಟನೆ



ಸೂರ್ಯಪ್ರಗತಿನ್ಯೂಸ್.ಕಾಂ

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ರೈತರ ಆಕ್ರೋಶ। ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಲು ಆಗ್ರಹ

ರಾಮನಗರ: ಬರ ಘೋಷಣೆ, ಸಾಲಮನ್ನಾ, ಕೃಷಿಗೆ ಸಮರ್ಪಕ ಬೆಲೆ, ಬೆಳೆನಷ್ಟಕ್ಕೆ ವೈಜ್ಞಾನಿಕ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಣಕು ಶವಯಾತ್ರೆ ಮಾಡುವ ಮೂಲಕ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ವಿನೂತವಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಎಪಿಎಂಸಿ ಮಾರುಕಟ್ಟೆ ಆವರಣದಿಂದ ಪ್ರಾರಂಭವಾದ ಅಣಕು ಶವಯಾತ್ರೆ ಪ್ರತಿಭಟನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ನೂರಾರು ರೈತರು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಶವಯಾತ್ರೆ ಪ್ರತಿಭಟನಾ ಮೆರವಣಿಗೆ ತಾಲ್ಲೂಕು ಆಡಳಿತ ಕಚೇರಿಗೆ ತಲುಪಿತು.

ತಾಲ್ಲೂಕು ಆಡಳಿತ ಕಚೇರಿ ಮುಂಭಾಗ ಜಮಾಯಿಸಿದ ರೈತ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ನಾಡಿನ ಅನ್ನದಾತರ ಸಮಸ್ಯೆ ಬಗ್ಗೆ ಸರ್ಕಾರ ಬೇಜಾವಾಬ್ದಾರಿ ಹಾಗೂ ದಿವ್ಯ ನಿರ್ಲಕ್ಷ್ಯ ತೋರುತ್ತಿದೆ ಎಂದು ಕಿಡಿಕಾರಿದರು.

ಉಪ ವಿಭಾಗಾಧಿಕಾರಿ ಬಿನೋಯ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ ಪ್ರತಿಭಟನಾನಿರತ ರೈತರು ಕೂಡಲೇ ತಮ್ಮ ನೆರವಿಗೆ ಸರ್ಕಾರಗಳು ಧಾವಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲಯ್ಯ ಮಾತನಾಡಿ, ರಾಜ್ಯದಲ್ಲಿ ಕಳೆದ 140 ವರ್ಷದ ನಂತರ ಘೋರ ಬರಗಾಲ ಉಂಟಾಗಿದೆ. ಈ ಹಿಂದೆ ಕಾಣದ ಭೀಕರ ಬರಗಾಲ ಎದುರಾಗಿದೆ. ಮಳೆಯಾಗದೆ ಕೆರೆ ಕಟ್ಟೆಗಳಲ್ಲಿ ನೀರಿಲ್ಲ. ಅಂತರ್ಜಲ ಕ್ಷೀಣಿಸುತ್ತಿದ್ದು, ಅಲ್ಲಲ್ಲಿ ಬೆಳೆದ ಫಸಲು ಒಣಗಿದೆ. ತೋಟಗಾರಿಕೆ ಬೆಳೆ ಹಂತ ಹಂತವಾಗಿ ರೈತನ ಕೈ ಕಚ್ಚುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ರೈತರು ಜೀವನೋಪಾಯಕ್ಕಾಗಿ ಉದ್ಯೋಗ ಅರಸಿ ದೂರದ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ದನ–ಕರುಗಳಿಗೆ ಹುಲ್ಲು ನೀರು ಇಲ್ಲದೆ, ಪರದಾಡುವಂತಾಗಿದೆ ಇಷ್ಟೆಲ್ಲಾ ಸಂಕಷ್ಟಗಳು ಎದುರಾಗಿದ್ದರೂ ರಾಜ್ಯ ಸರ್ಕಾರ 101 ತಾಲ್ಲೂಕುಗಳನ್ನು ಬರ ಎಂದು ಘೋಷಿಸಿದೆ. ಜಿಲ್ಲಾ ವ್ಯಾಪ್ತಿಯ ಕನಕಪುರ ಚನ್ನಪಟ್ಟಣ ಹಾರೋಹಳ್ಳಿ ತಾಲ್ಲೂಕುಗಳನ್ನು ಬರ ಈ ಪಟ್ಟಿಗೆ ಸೇರಿಸದೆ ಕಾಲಹರಣ ಮಾಡುತ್ತಿದೆ. ಅಲ್ಲದೇ ಸರ್ಕಾರ ಗ್ಯಾರಂಟಿ ಯೋಜನೆಯಲ್ಲಿ ನೀಡುವ 2 ಸಾವಿರ ಮಾದರಿಯಲ್ಲಿ ಪ್ರತಿ ರೈತರಿಗೆ 2,500 ಪರಿಹಾರ ನೀಡುವುದಾಗಿ ಘೋಷಿಸಿರುವುದು ಹಾಸ್ಯಾಸ್ಪದವಾಗಿದೆ ಎಂದು ಕಿಡಿಕಾರಿದರು.

ರೈತ ಮುಖಂಡ ಕುಮಾರಸ್ವಾಮಿ ಮಾತನಾಡಿ, ರೈತರ ಕೃಷಿ ಸಾಲ ಮನ್ನಾ ಆಗಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಶೇ. 50ರ ಅನುಪಾತದಲ್ಲಿ ಸಾಲ ಮನ್ನಾ ಮಾಡಬೇಕು. ಸರ್ಕಾರ ಸಾಲ ಮನ್ನಾ ಘೋಷಿಸುವ ವರೆವಿಗೂ ಬ್ಯಾಂಕುಗಳು ಸಾಲ ವಸೂಲಿ ಮಾಡುವುದನ್ನು ತಡೆಹಿಡಿಯಬೇಕು. ಕೃಷಿಗೆ ಪ್ರಥಮ ಆದ್ಯತೆ ನೀಡಿ ಸರ್ಕಾರ ಒಪ್ಪಿಕೊಂಡಿರುವಂತೆ ಕನಿಷ್ಠ 7 ಗಂಟೆಗಳ ಕಾಲ ವಿದ್ಯುತ್ ಅನ್ನು ಕೃಷಿ ಪಂಪ್‌ಸೆಟ್‌ಗಳಿಗೆ ಸರಬರಾಜು ಮಾಡಬೇಕು.! ರೈತರ ಕೃಷಿ ಚಟುವಟಿಕೆಗೆ ಟಿಸಿ ಕೆಟ್ಟುಹೋದ ಸಂದರ್ಭದಲ್ಲಿ 72 ಗಂಟೆಯೊಳಗೆ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಬಿಡದಿ ಹೋಬಳಿಯ ಭೈರಮಂಗಲ ಕಂಚುಗಾರನಹಳ್ಳಿ ಪಂಚಾಯಿತಿ ವ್ಯಾಪ್ತಿಯ ರೈತರ ಫಲವತ್ತಾದ ಭೂಮಿಯನ್ನು ಸ್ವಾದೀನ ಪಡಿಸಿಕೊಳ್ಳ ಲು ಹೊರಟಿರುವ ಸರ್ಕಾರ ಭೂ ಸ್ವಾಧೀನ ಕೈಬೇಡಬೇಕು ರೈತರ ಮೇಲೆ ದೌರ್ಜನ್ಯ ಮಾಡಿರುವ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಕನಕಪುರ ತಾಲೂಕಿನ ಹಾರೋಬೆಲೆ ಡ್ಯಾಮ್ ನಿಂದ ರೈತರ ಜಮೀನಿಗೆ ನೀರು ಕೊಡದೆ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನೀರು ರೈತರಿಗೆ ಅನ್ಯಾಯ ಮಾಡಿರುವ ಕಾವೇರಿ ನೀರಾವರಿ ನಿಗಮದ ಎಇ ಮತ್ತು ಎಇಇಗಳನ್ನು ಅಮಾನತ್ತು ಮಾಡಿ ತನಿಕೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಯಶವಂತ ಗುರುಕರ್ ಎರಡು ವರ್ಷದಿಂದ ರೈತರ ಕುಂದು ಕೊರತೆ ಸಭೆಯನ್ನು ಕರೆದಿಲ್ಲ, ಹೋರಾಟ ಮಾಡುವ ಸಂಘಟನೆಗಳಿಗೆ 144 ನಿಷೇಧಾಜ್ಞೆ ಜಾರಿ ಮಾಡಿರುವ ರೈತ ವಿರೋಧಿ ಜಿಲ್ಲಾಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

ಚನ್ನಪಟ್ಟಣ ತಾಲೂಕು ತಹಸೀಲ್ದಾರ್ ರೈತರ ಕುಂದು ಕೊರತೆ ಸಭೆ ಯಲ್ಲಿ ದಾಕಲದ ದೂರುಗಳು ಇದುವರೆವಿಗೂ ವಿಲೇವಾರಿ ಮಾಡಿಲ್ಲ ! ಸಾರ್ವಜನಿಕರ ಕೈಗೂ ಸಿಗುತ್ತಿಲ್ಲ ಕರ್ತವ್ಯದ ದಿನಗಳಲ್ಲಿ ಕಚೇರಿಗೆ ಗೈರು ರಜಾದಿನಗಳಲ್ಲಿ ಕಚೇರಿಗೆ ಹಾಜರಾಗುತ್ತಿದ್ದಾರೆ. ಕೂಡಲೇ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರಾದ ತಿಮ್ಮೇಗೌಡ, ಎಸ್.ಸಿ.ಕೃಷ್ಣಯ್ಯ, ವಿಜಯ್ ಕುಮಾರ್, ಶಿವರಾಜು ನಾಗರಾಜು, ಪ್ರಕಾಶ್ ಸೇರಿದಂತೆ ಹಲವರು ಇದ್ದರು.ರೈತರ ಮೇಲೆ ದೌರ್ಜನ್ಯ, ಮಾನವ ಹಕ್ಕುಗಳ ಉಲ್ಲಂಘನೆಬಿಡದಿ ಹೋರಾಟದಲ್ಲಿ ಭಾಗಿಯಾದ್ದ ರೈತರು ಹಾಗೂ ರೈತ ಮಹಿಳೆಯರು ಮೇಲೆ ಪೊಲೀಸರು ದೌರ್ಜನ್ಯ ಹಾಗೂ ಬಲವಂತವಾಗಿ ಬಂಧಿಸಿದ್ದಾರೆ. ಪ್ರಾಣಿಗಳ ಹಾಗೆ ಎಳೆದಾಡಿರುವ ಪೊಲೀಸರ ಈ ಕ್ರಮವೂ ಮಾನವ ಹಕ್ಕುಗಳ ಉಲ್ಲಂಘನೆಯಾಗಲಿದೆ.ಈ ಘಟನೆಯಲ್ಲಿ ಭಾಗಿಯಾಗಿರುವ ಪೊಲೀಸರ ವಿರುದ್ಧ ಕ್ರಮತೆಗೆದುಕೊಳ್ಳಬೇಕು.

ಕುರಿಗಳ ರೀತಿಯಲ್ಲಿ ರೈತರನ್ನು ಎಳೆಯಲು ಕಾನೂನಿನಲ್ಲಿ ಅವಕಾಶವಿದಯೇ? ಈ ಬಗ್ಗೆ ರಾಷ್ಟೀಯ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಲಾಗುತ್ತದೆ ಎಂದು ರೈತ ಮುಖಂಡ ಕುಮಾರಸ್ವಾಮಿ ತಿಳಿಸಿದರು.

ಬಹಿಸ್ಕಾರ ಹಿಂಪಡೆದು ಕಾರ್ಯಕ್ರಮಕ್ಕೆ ಬಾಗಿ



ಕೊಳ್ಳೇಗಾಲ ಶಾಸಕ ಎ. ಆರ್. ಕೃಷ್ಣಮೂರ್ತಿಯವರ ನಿರ್ಲಕ್ಷ್ಯದಿಂದ ಅಸಮಾಧಾನಗೊಂಡು ಸೆ. 30 ರಂದು ನಡೆಯಲಿರುವ ಮುಖ್ಯಮಂತ್ರಿಗಳ ಕಾರ್ಯಕ್ರಮವನ್ನು ಬಹಿಸ್ಕರಿಸಿದ್ದ ಪಟ್ಟಣದ ಅಂಜುಮಾನ್ ಎ. ಇಸ್ಲಾಮಿಯ ಒಕ್ಕೂಟದಿಂದ ಬಹಿಸ್ಕಾರ ಹಿಂಪಡೆದು ಇಂದು ಅಂಜುಮಾನ್ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಕರೆಯಲಾಗಿತ್ತುಅಂಜುಮಾನ್ ಕಂಪ್ಲೇಂಕ್ಸ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷರಾದ ಹಬೀಬ್ ಪಾಶ ಮಾತನಾಡಿ ಶಾಸಕರಾದ ಎ. ಆರ್. ಕೃಷ್ಣಮೂರ್ತಿ ಯವರು ಮುಸ್ಲಿಂ ಸಮುದಾಯದ ಸಾದಿ ಮಹಲ್ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಲು ಅನುದಾನವನ್ನು ಹಾಕಿ ಕೊಡುತ್ತೇನೆ ಹಾಗೂ ಸಮುದಾಯಕ್ಕೆ ಸ್ಮಶಾನಕ್ಕೆ ಜಾಗ ಕೊಡಿಸುತ್ತೇವೆ ಎಂದು ಹೇಳಿದ್ದರು ಅದರೆ ಸಾದಿ ಮಹಲ್ ಕಾಮಗಾರಿ ಇನ್ನು ಮುಗಿದಿಲ್ಲ ಪಕ್ಕದಲ್ಲಿ ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನೆಗೆ ಸಿದ್ದವಾಗಿದೆ, ಅದರ ಜೊತೆಯಲ್ಲಿಯೇ ಸಾದಿ ಮಹಲ್ ಉದ್ಘಾಟನೆ ಆಗಬೇಕಾಗಿತ್ತು ಆದರೆ ಕಾಮಗಾರಿ ಇನ್ನು ಮುಗಿದಿಲ್ಲ ಶಾಸಕರು 50 ಲಕ್ಷ ಹಾಕಿ ಕೊಟ್ಟಿದ್ದಾರೆ ಕಾಮಗಾರಿ ಮುಗಿಂಯಲು ಅಷ್ಟು ಅಮೌಂಟ್ ಸಾಲೋದಿಲ್ಲ ಹಾಗೂ ನಮ್ಮ ಸಮುದಾಯಕ್ಕೆ ಸ್ಮಶಾನದ ಕೊರತೆ ಇದೆ ಇದೆಲ್ಲ ಶಾಸಕರ ಬಳಿ ಬೇಡಿಕೆ ಇಟ್ಟಿದ್ದೇವೆ ಶಾಸಕರು ಅವರೆ ಸ್ವತಃ ನಮ್ಮ ಮುಖಂಡರ ಜೊತೆ ಮಾತನಾಡಿ ಆದಷ್ಟು ಬೇಗ ಸಾದಿ ಮಹಲ್ ಕಾಮಾಗಾರಿಯನ್ನು ಮುಗಿಸಿಕೊಡುತ್ತೇನೆ ಮತ್ತು ಸ್ಮಶಾನಕ್ಕೆ ಜಾಗದ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ ಆದ್ದರಿಂದ ನಮ್ಮ ಸಮುದಾಯದಿಂದ ಬಹಿಸ್ಕಾರವನ್ನು ಹಿಂಪಡೆದು ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ ಎಂದು ತಿಳಿಸಿದರು,

ಗಣೇಶೋತ್ಸವ ಒಗ್ಗಟ್ಟು, ವಿಶ್ವಾಸ ಮೂಡಿಸುತ್ತದೆ : ಕೆ.ಶೇಷಾದ್ರಿ; ಹೇರಂಬ ಪಂಚಮುಖಿ ಗಣಪತಿ ಮೂರ್ತಿ ವಿಸರ್ಜನೆ



ರಾಮನಗರ : ಸಾರ್ವಜನಿಕ ಗಣೇಶೋತ್ಸವಗಳು ಯುವಕರಲ್ಲಿ ಒಗ್ಗಟ್ಟು ಗೌರವ, ವಿಶ್ವಾಸ, ಪರಸ್ಪರರಲ್ಲಿ ಆತ್ಮೀಯತೆ ಮೂಡಿಸುತ್ತದೆ ಎಂದು ರಾಮನಗರ ನಗರಸಭಾ ಅಧ್ಯಕ್ಷ ಕೆ. ಶೇಷಾದ್ರಿ ತಿಳಿಸಿದರು.

ರಾಮನಗರದ ಛತ್ರದ ಬೀದಿಯಲ್ಲಿ ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಮತ್ತು ಅರಳೀಕಟ್ಟೆ ಗೆಳೆಯರ ಬಳಗ 42ನೇ ವರ್ಷದ ವಿಶೇಷವಾಗಿ ಪ್ರತಿಷ್ಠಾಪಿಸಿದ್ದ ಮುದ್ಗಲ್ ಪುರಾಣ ಪ್ರಸಿದ್ಧ ಹೇರಂಬ ಪಂಚಮುಖಿ ಗಣಪತಿಮೂರ್ತಿ ಮೆರವಣಿಗೆಗೆ ಭಾನುವಾರ ಚಾಲನೆ ನೀಡಿ ಮಾತನಾಡಿದರು.

ಗಣೇಶೋತ್ಸವ ಕಾರ್ಯಕ್ರಮಗಳು ಸಮಾಜದ ಸಾಮರಸ್ಯ ಸಾರುತ್ತವೆ. ಸಾರ್ವಜನಿಕ ಗಣೇಶೋತ್ಸವಗಳು ಸರ್ವರನ್ನೂ ಒಗ್ಗೂಡಿಸಿ ಸ್ನೇಹ, ಬಾಂಧವ್ಯ ಬೆಸೆಯುತ್ತದೆ. ಯುವಕರಲ್ಲಿ ಒಗ್ಗಟ್ಟು ಮೂಡಿಸುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮನೆ ಮನೆಗೆ ಸೀಮಿತವಾಗಿದ್ದ ಗಣೇಶಮೂರ್ತಿ ಪ್ರತಿಷ್ಠಾಪನೆಯನ್ನು, ಬಾಲಗಂಗಾಧರ ತಿಲಕರು ಜನರನ್ನು ಒಗ್ಗೂಡಿಸುವ ಸಲುವಾಗಿ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ತಂದರು. ಅಂದಿನಿಂದಲೂ ಸಾರ್ವಜನಿಕ ಗಣೇಶೋತ್ಸವಗಳು ವಿಜೃಂಭಣೆಯಿಂದ ನಡೆಯುತ್ತಿವೆ ಎಂದರು.

ರಾಮನಗರದಲ್ಲಿ ಕೂಡ ಹಿಂದಿನಿಂದಲೂ ಎಲ್ಲರೂ ಒಗ್ಗಟ್ಟಾಗಿ ಸಾರ್ವಜನಿಕವಾಗಿ ಗಣೇಶ ಹಬ್ಬ ಆಚರಿಸುತ್ತಾ ಬಂದಿದ್ದಾರೆ. ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಮತ್ತು ಅರಳೀಕಟ್ಟೆಗೆಳೆಂಯರ ಬಳಗ ಪ್ರತೀ ಭಾರಿ ಪುರಾಣ ಕಥೆಗಳಿಗೆ ಪೂರಕವಾಗಿ ಜನರಿಗೆ ಇತಿಹಾಸ ತಿಳಿಸಿ ಧಾರ್ಮಿಕ ಭಾವನೆ ಹೆಚ್ಚಿಸುತ್ತಿರುವುದು ಸಮಿತಿಯವರ ಸೇವಾ ಕಾರ್ಯಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಬಿಜೆಪಿ ರಾಮನಗರ ತಾಲ್ಲೂಕು ಅಧ್ಯಕ್ಷ ಗೌತಮ್‌ಗೌಡ ಮಾತನಾಡಿ ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಮತ್ತು ಅರಳೀಕಟ್ಟೆ ಗೆಳೆಯರ ಬಳಗ ಈ ಭಾರಿ 42ನೇ ವರ್ಷದ ಅಂಗವಾಗಿ ಮುದ್ಗಲ್ ಪುರಾಣ ಪ್ರಸಿದ್ಧ ಹೇರಂಬ ಪಂಚಮುಖಿ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಮಾಡಿ ಕಳೆದ 14 ದಿನಗಳಿಂದ ಪೂಜಿಸಿದ್ದಾರೆ. ಸಾವಿರಾರು ಜನರು ಗಣಪತಿ ದರ್ಶನ ಪಡೆದಿದ್ದಾರೆ. ಮುಂದೆ ಮತ್ತಷ್ಟು ವೈಶಿಷ್ಟ್ಯ ಗಣೇಶ ಆಚರಣೆ ಸಮಿಯವರಿಂದ ಆಗಲಿ ಎಲ್ಲರಿಗೂ ಗಣೇಶ ಒಳಿತು ಮಾಡಲಿ ಎಂದರು.

ಗಣೇಶಮೂರ್ತಿ ಮೆರವಣಿಗೆ ಸಾಗಿದ ಮಾರ್ಗ : ಗಣಪತಿ ಮೆರವಣಿಗೆಯು ಛತ್ರದ ಬೀದಿಯಲ್ಲಿನ ಆಸ್ಥಾನ ಮಂಟಪದಿಂದ ಹೊರಟು ಅಗ್ರಹಾರ, ಕಾಯಿಸೊಪ್ಪಿನಬೀದಿ, ನಗರಸಭೆ ರಸ್ತೆ, ಶೆಟ್ಟಿಹಳ್ಳಿ ಬೀದಿ, ಕಾಮನಗುಡಿ ಸರ್ಕಲ್, ಎಂ.ಜಿ.ರಸ್ತೆ, ಮಂಡಿಪೇಟೆ ಬಾಲಗೇರಿ, ಹಳೇ ಬಸ್ ನಿಲ್ದಾಣ, ಮಾಗಡಿ ರಸ್ತೆ ಮತ್ತು ಐಜೂರಿನ ಪ್ರಮುಖ ಬೀದಿಗಳಲ್ಲಿ ನಡೆಯಿತು. ನಂತರ ಭಾನುವಾರ ಸಂಜೆ ರಂಗರಾಯರದೊಡ್ಡಿ ಕೆರೆ ಬಳಿಯ ಸಿರಿಗೌರಿ ಕಲ್ಯಾಣಿಯಲ್ಲಿ ಗಣಪತಿ ವಿಸರ್ಜನೆ ಮಾಡಲಾಯಿತು. ಮೆರವಣಿಗೆಯಲ್ಲಿ ಡೊಳ್ಳುಕುಣಿತ, ಮೈಸೂರು ಚಂಡೆ, ಪೂಜಾ ಕುಣಿತ, ವೀರಗಾಸೆ ಅಘೋರಿ, ಗಾರುಡಿ, ಚಿಲಿಪಿಲಿ ಗೊಂಬೆ, ತಮಟೆ ಕಲಾವಿದರ ಜನಪದ ಕಲಾ ಮೇಳಗಳು ಮೆರವಣಿಗೆಗೆ ಮತ್ತಷ್ಟು ಮೆರಗು ಹೆಚ್ಚಿಸಿತ್ತು.

ನಗರ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ರಮೇಶ್, ಸಬ್ ಇನ್‌ಸ್ಪೆಕ್ಟರ್ ದೇವುಕುಮಾರ್, ಗಣೇಶ್ ಜುವೆಲ್ಲರಸ್ ಮಾಲೀಕ ಲಕ್ಷ್ಮಣ್, ವಿಪ್ರ ಯುವ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಕೇಶವ ವೈದ್ಯ, ಅರ್ಕಾವತಿ ವಿದ್ಯಾಗಣಪತಿ ಸೇವಾ ಸಮಿತಿ ಅಧ್ಯಕ್ಷ ರವೀಂದ್ರ ಹೇರ್ಳೆ, ಕಾರ್ಯದರ್ಶಿ ಉಮಾ ಮಹದೇವಪ್ಪ, ಖಜಾಂಚಿ ಗಿರೀಶ್‌ಕುಮಾರ್, ಸಂಚಾಲಕರಾದ ಆಟೋರಾಜು, ಆರ್. ಲೋಹಿತ್ ಸದಸ್ಯರಾದ ಶಾಂತಕುಮಾರ್, ಮಾದೇಶ್, ಪ್ರಶಾಂತ್, ಮಹೇಶ್, ಶಿವಕುಮಾರ್, ಸುಹಾಸ್, ಆಕಾಶ್, ವೈದಾತ್ರ, ಕಿರಣ್, ರವಿ, ಪ್ರತಾಪ್, ಸೂರಜ್, ರಮೇಶ್ ಮುಂತಾದವರಿದ್ದರು.

ಬರಗಾಲ ರೈತರ ಆತ್ಮ ವಿಶ್ವಾಸವನ್ನು ಕುಗ್ಗಿಸಿದೆ

ಶಿರಾ : ರಾಜ್ಯದಲ್ಲಿ ಬರಗಾಲ ರೈತರ ಆತ್ಮ ವಿಶ್ವಾಸವನ್ನು ಕುಗ್ಗಿಸಿದ್ದು, ಶಿರಾ ಬರಪೀಡಿತ ಎಂದು ಘೋಷಣೆ ಮಾಡಿದ್ದು ಸರ್ಕಾರ ತಕ್ಷಣ ಬರಪೂರ ಕಾಮಗಾರಿಗಳನ್ನು ಆರಂಭಿಸಿ ರೈತರ ನೆರವಿಗೆ ಧಾವಿಸ ಬೇಕು. ಅನ್ನದಾತನ ಸಂಕಷ್ಟ ಶ್ರೀ ಅಂಭಾ ದೇವಿ ದೂರ ಮಾಡಲಿಎಂದು ಪ್ರಾರ್ಥಿಸುವುದಾಗಿ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಮುದಮಡು ರಂಗಸ್ವಾಮಿ ಹೇಳಿದರು.ಶಿರಾ ತಾಲೂಕಿನ ಹುಲಿಕುಂಟೆ ಹೋಬಳಿಯ ಹೊಸಹಳ್ಳಿ ಗ್ರಾಮದ ಪ್ರಸಿದ್ಧ ಶ್ರೀ ಅಂಭಾದೇವಿ ದೇವಸ್ಥಾನದಲ್ಲಿ ಶ್ರೀದೇವಿಗೆ ರೈತರಸಂಕಷ್ಟ ದೂರ ಮಾಡಿ ನಾಡಿಗೆ ಸುಭಿಕ್ಷ ಕರುಣಿಸಲಿ ಎಂದು ಶ್ರೀ ಅಂಬಾ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.ಪ್ರಸಿದ್ಧ ಶ್ರೀ ಅಂಭಾ ದೇವಿ ಸುಕ್ಷೇತ್ರ ದೇವಿಯ ದೈವಿಕ ಪವಾಡ ಹೊಂದಿದ್ದು ಭಕ್ತರ ಇಷ್ಟಾರ್ಥ ಸಿದ್ಧಿ ಗೊಳಿಸುವ ಮಹಾತಾಯಿಯಪುಣ್ಯಕ್ಷೇತ್ರ ಎಂದರು.ಪತ್ರಕರ್ತ ಪ್ರವೀಣ್ ಹುಲಿಕುಂಟೆ, ಸರ್ವೆ ಪರಿವೀಕ್ಷಕ ಸಿ ಕೆ ಭೀಮಣ್ಣ, ಶ್ರೀ ಅಂಬಾದೇವಿ ದೇವಸ್ಥಾನ ಪ್ರಧಾನ ಅರ್ಚಕ ಶಶಿಧರ,ವೇದಪಂಡಿತ ಗೌತಮ್,ಮುಖಂಡರಾದ ರಮೇಶ್ ಮಂಜುನಾಥ್ ಮಹಾಂತೇಶ್ ಪ್ರಕಾಶ್ ಸೇರಿದಂತೆ ಹಲವಾರು

ಸಂವಹನ, ಕರುಣೆ ವೈದ್ಯಕೀಯ ವೃತ್ತಿಯ ಜೀವಾಳ; ಪ್ರಥಮ ವರ್ಷದ ಎಂಬಿಬಿಎಸ್ ಕೋರ್ಸ್ ಉದ್ಘಾಟನೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಸಿದ್ಧಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ 2026–27ನೇ ಸಾಲಿನ ಪ್ರಥಮ ವರ್ಷದ ಎಂಬಿಬಿಎಸ್ ಕೋರ್ಸ್ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು

ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ. ಹೆಚ್. ಬಸವನಗೌಡಪ್ಪ ರವರು

ವೈದ್ಯಕೀಯ ಶಿಕ್ಷಣದಲ್ಲಿ ಕೇವಲ ಅಂಕ ಗಳಿಸುವುದು ಅಥವಾ ಪದವಿ ಪಡೆಯುವುದು ಮುಖ್ಯವಲ್ಲ; ಉತ್ತಮ ವೈದ್ಯರಾಗಲು ಸಮರ್ಪಣಾ ಭಾವ, ಸಂವಹನ ಕೌಶಲ್ಯ ಹಾಗೂ ಕರುಣೆ ಅತ್ಯಂತ ಅಗತ್ಯ ಎಂದು ಅಭಿಪ್ರಾಯಪಟ್ಟರು.

ವೈದ್ಯಕೀಯ ಕ್ಷೇತ್ರದಲ್ಲಿ ಶೇ. 99ರಷ್ಟು ಅಹಿತಕರ ಘಟನೆಗಳು ಸಂಭವಿಸುವುದು ವೈದ್ಯರ ಬೇಜವಾಬ್ದಾರಿಯಿಂದಲ್ಲ, ಬದಲಿಗೆ ರೋಗಿಗಳೊಂದಿಗೆ ಸರಿಯಾದ ಸಂವಹನ ಕೊರತೆಯಿಂದ ಎಂದು ಅವರು ಹೇಳಿದರು. ಹೀಗಾಗಿ ವಿದ್ಯಾರ್ಥಿಗಳು ರೋಗಿಗಳ ಮಾತನ್ನು ತಾಳ್ಮೆಯಿಂದ ಆಲಿಸುವ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕೃತಕ ಬುದ್ಧಿಮತ್ತೆ ಕಲಿಕೆಗೆ ನೆರವಾಗುಬಲ್ಲದೇ ಹೊರತು, ರೋಗಿಯೊಂದಿಗಿನ ನೈತಿಕ ಸಂಬಂಧ ಹಾಗೂ ಕರುಣೆಯನ್ನು ತಂತ್ರಜ್ಞಾನ ನೀಡಲಾರದು ಎಂದ ಅವರು, ಡಾ. ದೇವಿ ಶೆಟ್ಟಿ ಹಾಗೂ ಡಾ. ಸಿ.ಎನ್. ಮಂಜುನಾಥ್ ಅವರಂತಹ ಸಾಧಕರ ಜೀವನ ಯುವ ವೈದ್ಯರಿಗೆ ಸ್ಫೂರ್ತಿಯಾಗಬೇಕು ಎಂದು ಕರೆ ನೀಡಿದರು.

ಎಸ್‌ಎಂಸಿಆರ್‌ಐ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಸ್. ಸಚ್ಚಿದಾನಂದ ಮಾತನಾಡಿ, ಸಂಸ್ಥೆಯು 'ಸಾಮರ್ಥ್ಯ ಆಧಾರಿತ ವೈದ್ಯಕೀಯ ಶಿಕ್ಷಣ' ನೀಡುವ ಮೂಲಕ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದ ಕರುಣಾಮಯಿ ವೈದ್ಯರನ್ನಾಗಿ ರೂಪಿಸಲು ಬದ್ಧವಾಗಿದೆ ಎಂದರು. ಕರ್ನಾಟಕದಲ್ಲಿ ಸುಮಾರು 80 ಹಾಗೂ ಭಾರತದಲ್ಲಿ 830ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳಿದ್ದು, ಆರ್‌ಜಿಯುಹೆಚ್‌ಎಸ್ ಸಂಯೋಜನೆಯಡಿ ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಪಠ್ಯ ಜ್ಞಾನದ ಜೊತೆಗೆ ಸಮಗ್ರವ್ಯಕ್ತಿತ್ವ ವಿಕಸನಕ್ಕೂ ಆದ್ಯತೆ ನೀಡುತ್ತಿದೆ ಎಂದು ವಿವರಿಸಿದರು.

ಶ್ರೀ ಸಿದ್ಧಗಂಗಾ ಮಠದ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ವೈದ್ಯಕೀಯ ವೃತ್ತಿ ಕೇವಲ ಶೈಕ್ಷಣಿಕ ಕೋರ್ಸ್ ಅಲ್ಲ, ಅದೊಂದು ಸಮಾಜ ಸೇವೆಯ ಜವಾಬ್ದಾರಿ ಎಂದರು. ಪ್ರತಿಯೊಬ್ಬ ವೈದ್ಯರಿಗೂ ಸಾಮರ್ಥ್ಯ, ಕರುಣೆ ಹಾಗೂ ಉತ್ತಮ ಚಾರಿತ್ರ್ಯ ಅತಿ ಮುಖ್ಯ ಎಂದು ಹಾರೈಸಿದರು.

ಇನ್ನು ಈ ಸಮಾರಂಭದಲ್ಲಿ ಸಿದ್ದಗಂಗಾ ಮಠದ ಕಾರ್ಯನಿರ್ವಾಹಕ ನಿರ್ದೇಶಕರಾದ ಜಯವಿಭವ ಸ್ವಾಮಿ, ವೈದ್ಯಕೀಯ ಸೇವೆಗಳ ಕಾರ್ಯದರ್ಶಿಗಳಾದ ಟಿ.ಎಂ. ಸ್ವಾಮಿ, ಜಂಟಿ ಕಾರ್ಯದರ್ಶಿ ಡಾ. ಶಿವಕುಮಾರಯ್ಯ, ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, ಮೆಡಿಕಲ್ ಕಾಲೇಜಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಎಸ್.ಸಚ್ಚಿದಾನಂದ, ವೈದ್ಯಕೀಯ ನಿರ್ದೇಶಕರಾದ ಡಾ. ಎಸ್. ಪರಮೇಶ್ , ವೈದ್ಯಕೀಯ ಅಧೀಕ್ಷಕರಾದ ಡಾ. ನಿರಂಜನ ಮೂರ್ತಿ ಬಿ, ಪ್ರಾಂಶುಪಾಲರಾದ ಡಾ. ಶಾಲಿನಿ ಎಂ. ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

"ಎಂ.ಬಿ.ಬಿ.ಎಸ್. ಸೇರ್ಪಡೆಯಾಗುವುದು ಸಮಾಜದೊಂದಿಗೆ ಮಾಡಿಕೊಳ್ಳುವ ಜೀವನಪರ್ಯಂತ ಬದ್ಧತೆ. ವೈದ್ಯರು ಕೇವಲ ರೋಗ ನಿರ್ಣಯ ಮಾಡುವವರಲ್ಲ, ರೋಗಿಗಳ ನೋವನ್ನು ಉಪಶಮನ ಮಾಡುವ 'ನೋವು ನಿವಾರಕರು' ಎಂಬ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಮಾತು ಸದಾ ನೆನಪಿರಲಿ. ನೂತನ ವಿದ್ಯಾರ್ಥಿಗಳು ಪೋಷಕರ ತ್ಯಾಗ ಮತ್ತು ಗುರುಗಳ ಮಾರ್ಗದರ್ಶನವನ್ನು ಎಂದಿಗೂ ಮರೆಯಬಾರದು."

ಡಾ. ಹೆಚ್. ಬಸವನಗೌಡಪ್ಪ, ಕುಲಪತಿಗಳು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು

"ವೈದ್ಯಕೀಯ ಶಿಕ್ಷಣಕ್ಕೆ ಕೊನೆಯೆಂಬುದಿಲ್ಲ. ಪಠ್ಯಪುಸ್ತಕಗಳ ಜೊತೆಗೆ ಪ್ರತಿಯೊಬ್ಬ ರೋಗಿಯೂ ಒಬ್ಬ ದೊಡ್ಡ ಶಿಕ್ಷಕ. ಕೃತಕ ಬುದ್ಧಿಮತ್ತೆ ಎಷ್ಟೇ ಬೆಳೆದರೂ ವೈದ್ಯ ಮತ್ತು ರೋಗಿಯ ನಡುವಿನ ಮಾನವೀಯ ಸಂಪರ್ಕ ಹಾಗೂ ನಂಬಿಕೆಯನ್ನು ತಂತ್ರಜ್ಞಾನ ಭರ್ತಿ ಮಾಡಲಾರದು."

ಶ್ರೀ ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ

ಬರದ ಪರಿಹಾರ 2500 ರೂ.ಘೋಷಣೆ ರೈತರಿಗೆ ಅವಮಾನ



ಸೂರ್ಯಪ್ರಗತಿನ್ಯೂಸ್.ಕಾಂ

ತಿಪಟೂರು: ರಾಜ್ಯದಲ್ಲಿ ತೀವ್ರ ಬರದ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ರೈತರಿಗೆ ರಾಜ್ಯ ಸರ್ಕಾರವು 2500 ರೂ. ಕೇವಲ ಬರದ ಪರಿಹಾರ ಹಣವೆಂದು ದೇಶದ ಬೆನ್ನೆಲುಬು ಆಗಿರುವ ರೈತರಿಗೆ ಅವಮಾನ ಮಾಡಿರುವುದು ಸರಿಯಲ್ಲ ಎಂದು ಜೆ.ಡಿ.ಎಸ್. ಮುಖಂಡ ಕೆ.ಟಿ ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದರು

ನಗರದ ತಮ್ಮ ಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಇಡೀ ರಾಜ್ಯದಲ್ಲಿ ರೈತರು ತುಂಬಾ ಸಂಕಷ್ಟಕ್ಕೆ ಸಿಲುಕಿದ್ದಾರೆ ಮುಂಗಾರು ಬೆಳೆ ಸಂಪೂರ್ಣವಾಗಿ ಕೈಕೊಟ್ಟಿದೆ ಮಳೆಯು ಇಲ್ಲದೆ ಹಿಂಗಾರು ಮುಂಗಾರು ಬೆಳೆ ಇಲ್ಲದೆ ರೈತರು ಭೂಮಿಯನ್ನು ಉಳುಮೆ ಮಾಡಿ ಕೆಲವು ರೈತರು ಬಿತ್ತನೆ ಮಾಡಿದ್ದಾರೆ ಬಿತ್ತನೆ ಮಾಡಿರುವ ಬೆಳೆಯ ಮೊಳಕೆಯನ್ನು ಕಂಡಿಲ್ಲ. ಇನ್ನು ಕೆಲವು ರೈತರು ಬಿತ್ತನೆ ಮಾಡಲಾಗಿಲ್ಲ ಇಂತಹ ಸಮಯದಲ್ಲಿ ರಾಜ್ಯ ಸರ್ಕಾರವು 3. ಎಕರೆಗೆ ಕನಿಷ್ಠ 15 ಸಾವಿರ ರೂ. ಬರ ಪರಿಹಾರ ಘೋಷಿಸಬೇಕಿತ್ತು. ಆದರೆ ರಾಜ್ಯ ಸರ್ಕಾರ 2500 ರೂ.ಗಳನ್ನು ಘೋಷಿಸಿದೆ ರೈತರು ಬಿತ್ತನೆಗೆ ತರುವ ಒಂದು ಚೀಲ ಗೊಬ್ಬರದ ಬೆಲೆಯು 2000 ದಿಂದ 3000 ದವರೆಗೆ ಇದೆ. ಕಿಸನ್ ಸನ್ಮಾನ್ ಮೋದಿಯವರ ಆಡಳಿತದಲ್ಲಿ ಬರಗಾಲ ಇರಲಿ ಇಲ್ಲದೆ ಇರಲಿ ಪ್ರತಿ ಕುಟುಂಬದ ರೈತರಿಗೆ 6000 ಹಣವನ್ನು ನೀಡುತ್ತಿದೆ ರೈತರಿಗೆ 2500 ರೂ ನೀಡಿರುವುದು ಸರಿಯಲ್ಲ ಬರದ ಪರಿಹಾರವಾಗಿ ರೈತರಿಗೆ 15,000 ರೂ ಘೋಷಣೆ ಮಾಡಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರೈತರ ಜೊತೆ ಸೇರಿ ದೊಡ್ಡ ಮಟ್ಟದ ಹೋರಾಟ ಮಾಡಲಾಗುವುದು. ರೈತರು ಜೀವನ ಕಟ್ಟಿಕೊಳ್ಳಲು ಕಷ್ಟವಾಗುತ್ತಿದೆ ಮಳೆ ಇಲ್ಲದೆ ತಾಲೂಕಿನಲ್ಲಿ ಅಂತರ್ಜಲ ಕುಸಿತ ಕಂಡಿದೆ. ಹೇಮಾವತಿ ನಾಲೆಗೆ ನೀರು ಬಿಟ್ಟರು ತಾಲೂಕಿನ ಯಾವುದೇ ಕೆರೆಗಳಿಗೆ ನೀರು ತುಂಬಿಸಿಲ್ಲ. ಬೇರೆ ಯಾವುದೋ ಕಾರಣ ಇಟ್ಟುಕೊಂಡು ನೊಣವಿನ ಕೆರೆ ಕೆರೆಗೆ ನೀರು ಬಿಡಲಿಲ್ಲ ಪಕ್ಕದ ತಾಲೂಕಿನ ಶಾಸಕರುಗಳು ಅವರ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸಗಳನ್ನು ಮಾಡಿದ್ದಾರೆ. ತಿಪಟೂರು ತಾಲೂಕಿನ ನೊಣವಿನಕೆರೆ. ಕೆರೆ. ಹೊನ್ನವಳ್ಳಿಯ ಕೆರೆ. ತಿಪಟೂರು ಕೆರೆ. ಹೀಗೆ ಕೆರೆಗಳಿಗೆ ನೀರು ತುಂಬಿಸಿದ್ದರೆ ಬೋರ್ವೆಲ್ ಗಳು ಸ್ಟಾರ್ಟ್ ಆಗುತ್ತಿದ್ದವು ರೈತರಿಗೆ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರು ಸಿಗುತ್ತಿತ್ತು. ಮತ್ತೊಂದೆಡೆ ದನಕರುಗಳಿಗೆ ಮೇವು ಕೂಡ ಇಲ್ಲ ಸರ್ಕಾರವು ಬರ ಘೋಷಣೆ ಮಾಡಿದ್ದರು ಧನ ಕರುಗಳಿಗೆ ಮೇವಿನ ವ್ಯವಸ್ಥೆ ಮಾಡಿಲ್ಲ ಗೋ ಶಾಲೆಗಳನ್ನು ತೆರೆದಿಲ್ಲ ಎಂದು ಕೆ.ಟಿ. ಶಾಂತಕುಮಾರ್ ಆಪಾದಿಸಿದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಶಾಂತಿಯಿಂದ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಚುನಾವಣೆ



ಸೂರ್ಯಪ್ರಗತಿನ್ಯೂಸ್.ಕಾಂ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಬೆಂಡೋಣೆ ಸಂಸ್ಥೆಯ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ ಅತ್ಯಂತ ಶಾಂತಿಯುತವಾಗಿ ಹಾಗೂ ಪ್ರಜಾಸತ್ತಾತ್ಮಕವಾಗಿ ನೆರವೇರಿದೆ. ನಿನೆ ನಡೆದ ಈ ಚುನಾವಣೆಯಲ್ಲಿ ಸಂಘದ ಮತದಾರ ಬಂಧುಗಳು ತಮ್ಮ ಹಕ್ಕನ್ನು ಚಲಾಯಿಸಿ, ಕ್ರಮಬದ್ಧವಾಗಿ 15 ಜನ ಅಭ್ಯರ್ಥಿಗಳನ್ನು ನೂತನ ನಿರ್ದೇಶಕರನ್ನಾಗಿ ವಿಜಯ್ ಶಂಕರ್ ಎಂಪಿ, ಹನುಮಂತರಾಯಪ್ಪ, ಅಶ್ವತಯ್ಯ, ಅಖಂಡ ಆರಾಧ್ಯ, ಮಂಜುನಾಥ್, ರಮ್ಯಾ, ಮಮತ, ರೇವಣ್ಣ ಸಿದ್ದಯ್ಯ, ರಮೇಶ್, ರವರು 6 ನಿರ್ದೇಶಕರು ಸಾಮಾನ್ಯ ಕ್ಷೇತ್ರದಿಂದ, 2 ಮಹಿಳಾ ಮೀಸಲು ಕ್ಷೇತ್ರ,1 ಪರಿಶಿಷ್ಟ ಜಾತಿ, 1 ಪರಿಶಿಷ್ಟ ಪಂಗಡ,2 ಹಿಂದುಳಿದ ವರ್ಗದಿಂದ ಆಯ್ಕೆ ಮಾಡಿದ್ದಾರೆ. ಈ ಅಭೂತ ಪೂರ್ವ ಗೆಲುವಿಗೆ ಕಾರಣಕರ್ತರಾದ ನಮ್ಮ ಸಂಘದ ಪ್ರತಿಯೊಬ್ಬ ಸದಸ್ಯರಿಗೂ ಮತ್ತು ರೈತ ಬಾಂಧವರಿಗೂ ನೂತನ ಆಡಳಿತ ಮಂಡಳಿಯ ಪರವಾಗಿ ಶಿರಸಾಷ್ಟಾಂಗ ಪ್ರಣಾಮಗಳು. ರೈತರ ಏಳಿಗೆಯೇ ನಮ್ಮ ಮೂಲ ಮಂತ್ರಸಹಕಾರ ಕ್ಷೇತ್ರವು ಕೃಷಿಕರ ಮತ್ತು ಗ್ರಾಮದ ಆರ್ಥಿಕ ಬೆನ್ನೆಲುಬಾಗಿದೆ. ಸಂಘದ ಮೂಲಕ ಲಭ್ಯವಾಗುವ ಸಾಲ ಸೌಲಭ್ಯಗಳು, ಸರ್ಕಾರದ ಯೋಜನೆಗಳು ಹಾಗೂ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಪ್ರತಿಯೊಬ್ಬ ಅರ್ಹ ರೈತರಿಗೂ ತಲುಪಿಸುವುದು ನಮ್ಮ ನೂತನ ಮಂಡಳಿಯ ಮೊದಲ ಆದ್ಯತೆಯಾಗಿರುತ್ತದೆ.

ನಮ್ಮ ಮುಂದಿನ ಐದು ವರ್ಷಗಳ ಧ್ಯೇಯೋದ್ದೇಶಗಳು:

ರೈತ ಸ್ನೇಹಿ ಆಡಳಿತ: ಸಂಘದಲ್ಲಿ ಪಾರದರ್ಶಕತೆ ಮತ್ತು ಕ್ಷಿಪ್ರ ಸೇವೆಗೆ ಒತ್ತು ನೀಡುವುದು.ಸಾಲ ಸೌಲಭ್ಯಗಳ ಸದುಪಯೋಗ: ಶೂನ್ಯ ಬಡ್ಡಿ ದರದ ಕೃಷಿ ಸಾಲ ಹಾಗೂ ಮಧ್ಯಮಾವಧಿ ಸಾಲಗಳನ್ನು ಸಮಯಕ್ಕೆ ಸರಿಯಾಗಿ ವಿತರಿಸುವುದು.

ತಂತ್ರಜ್ಞಾನದ ಬಳಕೆ: ಡಿಜಿಟಲೀಕರಣದ ಮೂಲಕ ಸಂಘದ ವಹಿವಾಟನ್ನು ಇನ್ನಷ್ಟು ಸುಲಭಗೊಳಿಸುವುದು.ಸಂಘದ ಪ್ರಗತಿ: ಎಲ್ಲಾ ರೈತ ಸದಸ್ಯರನ್ನು ಒಗ್ಗೂಡಿಸಿಕೊಂಡು ಬೆಂಡೋಣೆ ಸಹಕಾರ ಸಂಘವನ್ನು ತಾಲೂಕಿನಲ್ಲೇ ಮಾದರಿ ಸಂಘವನ್ನಾಗಿ ಬೆಳೆಸುವುದು.ಗೆಲುವು ಎನ್ನುವುದು ಅಧಿಕಾರವಲ್ಲ, ಅದೊಂದು ದೊಡ್ಡ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಮಗೆ ನೀಡಿದ ನಿಮ್ಮ ನಂಬಿಕೆಗೆ ಯಾವುದೇ ಕುಂದು ಬಾರದಂತೆ, ಬರುವ ಐದು ವರ್ಷಗಳ ಕಾಲ ಪ್ರಾಮಾಣಿಕವಾಗಿ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುತ್ತೇವೆ ಎಂದು ಈ ಮೂಲಕ ಭರವಸೆ ನೀಡುತ್ತಿದ್ದೇವೆ. ಈ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿ ಕೊಟ್ಟ ಚುನಾವಣಾಧಿಕಾರಿಗಳಿಗೂ, ಪೊಲೀಸ್ ಸಿಬ್ಬಂದಿಗೂ, ಸಂಘದ ಸಿಬ್ಬಂದಿ ವರ್ಗದವರಿಗೂ ಹಾಗೂ ಪೂಜಾ ಕಾರ್ಯಕ್ರಮದಲ್ಲಿ ಕೃಷ್ಣಪ್ಪ, ನರಸಿಂಹಮೂರ್ತಿ, ಪುಟ್ಟ ನರಸಯ್ಯ, ಕೇಬಲ್ ರಂಗಪ್ಪ, ಚಿಕ್ಕಣ್ಣ, ಶ್ರೀಧರ್, ಗೋಪಾಲಯ್ಯ, ಮಹಾಲಿಂಗಯ್ಯ, ನವೀನ್ ಮಹದೇವ್ ವಿಜಿ ಕುಮಾರ್, ಸಿದ್ದಲಿಂಗಪ್ಪ ಮಲ್ಲೇಕಾವ್, ದೇವರಾಜ್, ಹನುಮಂತರಾಯಪ್ಪ, ನಾಗಣ್ಣ ಮಾರಿಪಾಳ್ಯ, ಅಹೋರಾತ್ರಿ ಶ್ರಮಿಸಿದ ಪ್ರತಿಯೊಬ್ಬ ಕಾರ್ಯಕರ್ತರಿಗೂ ಧನ್ಯವಾದಗಳು ತಿಳಿಸಿದರು

ದಲಿತ ಯುವಕ ಸಿಂಹಾದ್ರಿ ಹತ್ಯೆ ಖಂಡಿಸಿ ಕುಣಿಗಲ್ ನಲ್ಲಿ ಪ್ರತಿಭಟನೆ



ಸೂರ್ಯಪ್ರಗತಿನ್ಯೂಸ್.ಕಾಂ

ಕುಣಿಗಲ್: ಯಾವುದೇ ಸರ್ಕಾರಗಳು ದಲಿತರ ಪರವಾಗಿಲ್ಲ ದಲಿತರ ಮೇಲೆ ನಿರಂತರ ವಾಗಿ ದೌರ್ಜನ್ಯ, ಕೊಲೆ, ಅತ್ಯಾಚಾರ, ನಡೆಯುತ್ತಿದ್ದರೂ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ ಎಂದು ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ತೀವ್ರ ಅಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಜಿಲ್ಲೆಯ ಮಧುಗಿರಿ ತಾಲೂಕಿನ ಕಾಸಪುರ ಗ್ರಾಮದ ದಲಿತ ಯುವಕ ಸಿಂಹಾದ್ರಿ ಹತ್ಯೆ ಖಂಡಿಸಿ ದಲಿತ ಸಂಘಟನೆಗಳ ಸಭೆಯ ಉದ್ದೇಶಿಸಿ ಮಾತನಾಡಿ ಕ್ಷುಲ್ಲಕ ಕಾರಣಗಳಿಗಾಗಿ ದಲಿತರನ್ನು ಹತ್ಯೆ ಮಾಡುತ್ತಿದ್ದರೂ ಸಂಸದ ರಾಗಲಿ, ಸಚಿವ ರಾಗಲಿ, ಶಾಸಕ ರಾಗಲಿ, ದಲಿತರ ಪರವಾಗಿ ಧ್ವನಿಯೆತ್ತದಿರುವುದು ಖಂಡನೀಯ, ಆದರೂ ನಾವು ದಲಿತರ ಪರವಾಗಿದ್ದೇವೆ, ದಲಿತ ಉದ್ಧಾರಕರು ಎಂದು ರಾಜಕೀಯ ದೊಂಬರಾಟ ವಾಡುತ್ತಿದ್ದಾರೆ ಎಂದುರು.

ಜಿಲ್ಲಾಡಳಿತ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವಲ್ಲಿ ವಿಫಲವಾಗಿದೆ, ಕ್ಷುಲ್ಲಕ ಕಾರಣಕ್ಕಾಗಿ ಕೊಲೆ, ಅತ್ಯಾಚಾರ, ದೌರ್ಜನ್ಯಗಳು ನಡೆದಾಗ ಪ್ರಕರಣ ದಾಖಲಿಸಿ ಕೊಂಡು ಪರಿಹಾರ ಕೊಟ್ಟು ಕೈ ತೊಳೆದು ಕೊಂಡರೆ ಸಾಲದು, ಸರ್ಕಾರ ದಲಿತರ ಜೀವಗಳನ್ನ ರಕ್ಷಿಸುವ ಕ್ರಮಗಳನ್ನ ಕೈಗೊಳ್ಳಬೇಕು ಮತ್ತು ಕಾಯ್ದೆಗಳನ್ನ ಜಾರಿಗೊಳಿಸಬೇಕು . ದಲಿತರು ಗೃಹ ಮತ್ತು ಕಂದಾಯ ಸಚಿವರಾದಾಗಲೇ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತವೆ, ದಲಿತರ ಭೂಮಿಯನ್ನ ಕಸಿದುಕೊಳ್ಳುವ ಪ್ರಯತ್ನಗಳು ನಡೆಯುತ್ತವೆ, ಸಮುದಾಯಗಳ ಮೇಲೆ ದೌರ್ಜನ್ಯಗಳು ನಡೆದಾಗ ರಾಜಕಾರಣ ವನ್ನು ಬದಿಗೊತ್ತಿ ಒಂದಾಗಿ ಸಮುದಾಯದ ಪರವಾಗಿ ನಿಂತು ಹೋರಾಟ ಮಾಡಬೇಕು ಎಂದರು.

ಪಟ್ಟಣಗಳಲ್ಲಿ ಗಣೇಶನನ್ನು ವಿಸರ್ಜಿಸುವ ಸಂದರ್ಭದಲ್ಲಿ ಸಾಕಷ್ಟು ಮುತುವರ್ಜಿ ವಹಿಸುವ ಪೊಲೀಸರು ಗ್ರಾಮಾಂತರ ಪ್ರದೇಶದ ಕೆಲವು ಗ್ರಾಮಗಳಲ್ಲಿ ಅಷ್ಟೇ ಮುತುವರ್ಜಿ ವಹಿಸಿ ಸ್ವಲ್ಪ ಎಚ್ಚರ ವಹಿಸಿದ್ದರೆ ಸಿಂಹಾದ್ರಿ ಇಂದು ಬದುಕುಳಿಯುತ್ತಿದ್ದನು, ಸಿಂಹಾದ್ರಿ ಸಾವಿಗೆ ಪೊಲೀಸರ ವೈಫಲ್ಯವೇ ಕಾರಣ, ಜಿಲ್ಲಾಡಳಿತ ಸಿಂಹಾದ್ರಿ ಸಾವಿನ ಹೊಣೆಯನ್ನ ನೇರವಾಗಿ ಹೊರಬೇಕು .

ತಾಲೂಕಿನಲ್ಲೂ ದಲಿತರು ಮತ್ತು ಬಲಾಡ್ಯರ ನಡುವೆ ಭೂ ವಿವಾದಗಳು ನಡೆಯುತ್ತಿವೆ, ತಾಲ್ಲೂಕು ಆಡಳಿತ ಸಮಸ್ಯೆ ಬಗೆಹರಿಸ ದಿದ್ದರೆ ದಲಿತರು ಮತ್ತು ಬಲಾಡ್ಯರ ನಡುವೆ ದ್ವೇಷಗಳು ಬೆಳೆಯುವುದರ ಜೊತೆಗೆ ದಲಿತರ ಮೇಲೆ ದೌರ್ಜನ್ಯಗಳು ನಡೆಯುವ ಸಂಭವವಿದೆ ಎಂದರು.ದಲಿತ ಯುವಕ ನನ್ನ ಕೊಂದ ಆರೋಪಿ ಮತ್ತು ಹತ್ಯೆಗೆ ಕುಮಕ್ಕು ನೀಡಿದ ಆರೋಪಿಗಳ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಗಡಿಪಾರು ಮಾಡಬೇಕು ಮತ್ತು ಮಗನನ್ನ ಕಳೆದುಕೊಂಡ ತಾಯಿಗೆ ಐದು ಲಕ್ಷ ಪರಿಹಾರ ಮತ್ತು ಎರಡು ಎಕರೆ ಜಮೀನು ಕೊಡಬೇಕು ಎಂದರು.

ಸಿರಸ್ತೆದಾರ್ ನಾಗಮ್ಮ ಮನವಿ ಸ್ವೀಕರಿಸಿದರು ತಹಶಿಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ರವಾನಿ ಸುವಂತೆ ದಲಿತ ಸಂಘಟನೆಗಳು ಪದಾಧಿಕಾರಿಗಳು ಒತ್ತಾಯಿಸಿದರು.

ಪ್ರತಿಭಟನೆ ಯಲ್ಲಿ ಒಕ್ಕೂಟದ ಪದಾಧಿಕಾರಿ ಗಳಾದ ವಿ, ಶಿವಶಂಕರ್, ಎಸ್, ಆರ್, ಚಿಕ್ಕಣ್ಣ, ದಲಿತ್ ನಾರಾಯಣ್, ಜಿ, ಕೆ,ನಾಗಣ್ಣ, ಎಸ್, ಟಿ, ರಾಜು, ಭಕ್ತರಹಳ್ಳಿ ಕುಮಾರ್, ಎನ್, ಆರ್, ಲಕ್ಷ್ಮಿ ನಾರಾಯಣ್, ಶೇಷಣ್ಣ, ಶ್ರೀನಿವಾಸ್, ಆನಂದ್, ಪ್ರಶಾಂತ್, ರಾಮಕೃಷ್ಣ, ಲಕ್ಷ್ಮೀನರಸಿಂಹ, ವನಜ, ಸಿದ್ದರಾಜು, ಅನೇಕ ಮುಖಂಡರು ಇದ್ದರು

ಸಣ್ ಸುದ್ದಿ

ಶ್ರೀ ಸಿದ್ದಿ ವಿನಾಯಕ ಸ್ವಾಮಿ ವಿಸರ್ಜನೆ
ಇಂದು ಮಾರ್ಕೆಟ್ ರಜಾ



ಸೂರ್ಯಪ್ರಗತಿನ್ಯೂಸ್.ಕಾಂ

ತರಕಾರಿ ಹಣ್ಣು ಹೂವು ವಿಳೇದೆಲೆ ಮಾರಾಟಗಾರರ ಸಂಘದ ವತಿಯಿಂದ ತುಮಕೂರು ತರಕಾರಿ ಮಾರುಕಟ್ಟೆಯಲ್ಲಿ ಸ್ಥಾಪಿಸಲಾಗಿದ್ದ ಶ್ರೀ ಸಿದ್ದಿ ವಿನಾಯಕ ಸ್ವಾಮಿಯ ವೈಭವದ ವಿಸರ್ಜನಾ ಪ್ರಯುಕ್ತ ಇಂದು ದಿನಾಂಕ 30–09–2026 ಬುಧವಾರ ನಡೆಯಲಿದ್ದು ಇಂದು ಬುದವಾರ ಸಮಸ್ತ ಮಾರುಕಟ್ಟೆಗೆ ರಜೆ ಘೋಷಿಸಲಾಗಿದೆ ಎಂದು ತರಕಾರಿ ಹಣ್ಣು ವಿಳೇದೆಲೆ ಮಾರಾಟಗಾರರ ಸಂಘ ತಿಳಿಸಿದೆ. 29ನೇ ವರ್ಷದ ವೈಭವದ ವಿಸರ್ಜನಾ ಮಹೋತ್ಸಹವು ಅಂತರಸನಹಳ್ಳಿ ಮಾರುಕಟ್ಟೆಯಿಂದ ಹೊರಟು ಗಾರ್ಡನ್ ರಸ್ತೆಯಲ್ಲಿರುವ ಕೆ.ಎನ್.ಎನ್ ಕಲ್ಯಾಣಿಯಲ್ಲಿ ಸಂಜೆ 6:30 ಕ್ಕೆ ವಿಸರ್ಜಿಸಲಾಗುವುದು ಎಂದು ಸಂಘ ತಿಳಿಸಿದೆ. ಹಾಗೂ ಸಾರ್ವಜನಿಕರು ಹಾಗೂ ರೈತರು ಮಾರುಕಟ್ಟೆಗೆ ರಜೆ ಇರುವ ಕಾರಣ ಸಹಕಾರ ನೀಡಬೇಕೆಂದು ಕೋರಿದೆ.

ಶಾಲೆಗಳಲ್ಲಿ ರೇಬಿಸ್ ಅರಿವು: ವಿದ್ಯಾರ್ಥಿಗಳಿಗೆ ಜಾಗೃತಿ



ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ: ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ರೇಬಿಸ್ (ನಾಯಿ ಹುಚ್ಚು ರೋಗ) ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ರೇಬಿಸ್ ರೋಗದ ಹರಡುವಿಕೆ, ಲಕ್ಷಣಗಳು, ತಡೆಗಟ್ಟುವ ವಿಧಾನಗಳು ಹಾಗೂ ನಾಯಿ ಸೇರಿದಂತೆ ಇತರ ಪ್ರಾಣಿಗಳಿಂದ ಕಚ್ಚಿಸಿಕೊಂಡ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

ರೇಬಿಸ್ ಗಂಭೀರ ವೈರಾಣು ರೋಗವಾಗಿದ್ದು, ಸೋಂಕಿತ ಪ್ರಾಣಿಗಳ ಕಡಿತ ಅಥವಾ ಜೊಲ್ಲಿನ ಸಂಪರ್ಕದಿಂದ ಹರಡಬಹುದು. ಆದ್ದರಿಂದ ಬೀದಿ ನಾಯಿಗಳು ಹಾಗೂ ಇತರ ಪ್ರಾಣಿಗಳನ್ನು ಅನಗತ್ಯವಾಗಿ ಕೆಣಕಬಾರದು. ಪ್ರಾಣಿಗಳೊಂದಿಗೆ ಸುರಕ್ಷಿತವಾಗಿ ವರ್ತಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ನಾಯಿ ಅಥವಾ ಇತರ ಪ್ರಾಣಿಗಳು ಕಚ್ಚಿದ ಸಂದರ್ಭದಲ್ಲಿ ಗಾಯವನ್ನು ತಕ್ಷಣ ಸ್ವಚ್ಛ ನೀರು ಹಾಗೂ ಸಾಬೂನಿನಿಂದ ತೊಳೆದು, ವಿಳಂಬ ಮಾಡದೆ ವೈದ್ಯಕೀಯ ಚಿಕಿತ್ಸೆ ಹಾಗೂ ಅಗತ್ಯ ರೇಬಿಸ್ ಲಸಿಕೆ ಪಡೆಯುವ ಕುರಿತು ಅರಿವು ಮೂಡಿಸಲಾಯಿತು.

ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ರೇಬಿಸ್ ತಡೆಗಟ್ಟುವಿಕೆ, ಆರೋಗ್ಯ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಸಾರ್ವಜನಿಕರು ವಹಿಸಬೇಕಾದ ಜಾಗ್ರತೆ ಕುರಿತು ಮಾಹಿತಿ ನೀಡಿದರು.

ಅರಿವು ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ರೇಬಿಸ್ ರೋಗದ ಅಪಾಯ, ತಡೆಗಟ್ಟುವಿಕೆ ಹಾಗೂ ಪ್ರಾಣಿಗಳೊಂದಿಗೆ ಸುರಕ್ಷಿತವಾಗಿ ವರ್ತಿಸುವ ಕುರಿತು ಮಾಹಿತಿ ಪಡೆದುಕೊಂಡರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಫುಟ್ ಪಾಟ್ ತೆರುವುಗೊಳಿಸುವ ಕಾರ್ಯ

ಸೂರ್ಯಪ್ರಗತಿನ್ಯೂಸ್.ಕಾಂ




ಮಧುಗಿರಿ : ಪಟ್ಟಣದಲ್ಲಿ ಪುರಸಭೆ ಮತ್ತು ಪೊಲೀಸ್ ಇಲಾಖೆಯ ಜಂಟಿ ಕಾರ್ಯಾಚರಣೆಯಲ್ಲಿ ಫುಟ್ ಪಾಟ್ ತೆರುವುಗೊಳಿಸುವ ಕಾರ್ಯ ಮಂಗಳವಾರ ನಡೆಸಿದರು. ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿ ಮಠ ಮುಂಭಾಗ ಬಸ್ ತಂಗುದಾಣಕ್ಕೆ ಹೊಂದಿಕೊಂಡಂತೆ ಇದ್ದಂತಹ ಪೆಟ್ಟಿಗೆ ಅಂಗಡಿ ಗಳನ್ನು ತೆರವುಗೊಳಿಸಿ ,ಬೀದಿ ಬದಿ ವ್ಯಾಪಾರಿಗಳು ಫುಟ್ ಪಾತ್ ಮೀರಿ ಅಂಗಡಿಗಳನ್ನು ಇಟ್ಟುಕೊಂಡಿದ್ದನ್ನು ಹಿಂದಕ್ಕೆ ಇಟ್ಟುಕೊಂಡು ಪ್ರಯಾಣಿಕರಿಗೆ ಮತ್ತು ಸಾರ್ವಜನಿಕರಿಗೆ ಸುಗಮವಾಗಿ ಓಡಾಡಲು ಆಗುವ ರೀತಿ ತೆರವು ಗೊಳಿಸಲಾಯಿತು. ನಂತರ ಟೌನ್ ಹಾಲ್ ರಸ್ತೆ, ಡುಂ ಲೈಟ್ ವೃತ್ತ, ಹೈ ಸ್ಕೂಲ್ ರಸ್ತೆ ,ಕೆ.ಹೆಚ್. ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿದ್ದಂತಹ ಫುಟ್ ಪಾತ್ ವ್ಯಾಪಾರಿಗಳನ್ನು ಸಾರ್ವಜನಿಕರಿಗೆ ತೊಂದರೆ ಆಗದ ರೀತಿ ಮತ್ತು ವಾಹನ ಸವಾರರು ಸಹ ಅನುಕೂಲವಾಗುವ ರೀತಿ ರಸ್ತೆಯ ಮೇಲಿದ್ದಂತಹ ಎಲ್ಲಾ ಅಂಗಡಿಗಳನ್ನು ತೆರವುಗೊಳಿಸಿ ಹಿಂದಕ್ಕೆ ಇಟ್ಟುಕೊಂಡು ವ್ಯಾಪಾರ ಮಾಡುವಂತೆ ಸೂಚಿಸಲಾಯಿತು.ಶಾಲಾ ಮಕ್ಕಳು ಅದರಲ್ಲೂ ವಿಶೇಷವಾಗಿ ಎಂಜಿಎಂ ಬಾಲಿಕಾ ವಿದ್ಯಾರ್ಥಿನಿಯರು ಶಾಲೆಯ ಬಿಟ್ಟ ನಂತರ ಗ್ರಾಮಗಳಿಗೆ ತೆರಳಬೇಕಾದಾಗ ಶ್ರೀ ರಾಘವೇಂದ್ರ ಸ್ವಾಮಿ ಮಠದ ಮುಂಭಾಗದ ಬಸ್ ನಿಲ್ದಾಣದಲ್ಲಿ ನಿಲ್ಲಲು ಸಹ ಆಗದಂತಹ ಪರಿಸ್ಥಿತಿಯಲ್ಲಿ ಬಸ್ಸಿಗೆ ಕಾಯುತ್ತಿದ್ದನ್ನು ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದ್ದನ್ನು ಸ್ಮರಿಸಬಹುದು.

ಇದಲ್ಲದೆ ಪ್ಯಾಸೆಂಜರ್ ಆಟೋಗಳು ಎಲ್ಲಂದರಲ್ಲಿ ನಿಲ್ಲುತ್ತಿದ್ದರಿಂದ ಅಪಘಾತ ವಲಯವಾಗಿ ಪರಿವರ್ತನೆಗೊಂಡಿತ್ತು. ಇದನ್ನು ಮನಗಂಡ ಪೊಲೀಸ್ ಇಲಾಖೆ ಮತ್ತು ಪುರಸಭೆಯವರು ಫುಟ್ ಪಾಟ್ ತೆರವು ಮಾಡಿದರು.

ಪುರಸಭೆ ಮುಖ್ಯಾಧಿಕಾರಿ ಸುರೇಶ್, ಪಿಎಸ್ಐ ಎಮ್.ಎಸ್ .ಚಂದ್ರಶೇಖರ್,ಪುರಸಭೆ ಆರೋಗ್ಯ ನಿರೀಕ್ಷಕ ಬಾಲಾಜಿ ,ಸುರೇಶ್ ಪೊಲೀಸ್ ಸಿಬ್ಬಂದಿ ಹಾಗೂ ಪೌರಕಾರ್ಮಿಕರು ತೆರವು ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಸಂಸ್ಕೃತಿ, ಸಂಸ್ಕಾರವನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮ ಜವಾಬ್ದಾರಿ



ಬೆಂಗಳೂರು,: ಸಾಧನೆ ಎನ್ನುವುದು ಪರಿಶ್ರಮ, ಶಿಸ್ತು ಮತ್ತು ದೂರದೃಷ್ಟಿಯ ಫಲವಾಗಿದ್ದು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಸಮಾಜಕ್ಕೆ ಕೊಡುಗೆ ನೀಡಿರುವ ಸಾಧಕರು ಮುಂದಿನ ಪೀಳಿಗೆಗೆ ಆದರ್ಶವಾಗಿದ್ದಾರೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ಹೇಳಿದರು.

ಡಾ. ಸಿ. ಸೋಮಶೇಖರಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನದ ವತಿಯಿಂದ ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ಸಂಸ್ಕೃತಿ ಸಂಗಮ–2026' ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನನ್ನ ದೃಷ್ಟಿಯಲ್ಲಿ ಸಾಧನೆ ಎಂದರೆ ಪರಿಶ್ರಮ, ಶಿಸ್ತು ಮತ್ತು ದೂರದೃಷ್ಟಿ. ಈ ಗುಣಗಳನ್ನು ಮೈಗೂಡಿಸಿಕೊಂಡು ವ್ಯಕ್ತಿ ತನ್ನ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಾನೆ. ಇಂದು ಪ್ರಶಸ್ತಿ ಸ್ವೀಕರಿಸಿರುವ ಎಲ್ಲ ಸಾಧಕರು ನಮಗೆ ಆದರ್ಶವಾಗಿದ್ದಾರೆ ಎಂದರು.

ಭಾರತದ ಸಂಸ್ಕೃತಿಗೆ ವಿಶ್ವದಲ್ಲಿಯೇ ವಿಶಿಷ್ಟ ಸ್ಥಾನವಿದೆ. ಬೇರೆ ಯಾವುದೇ ರಾಷ್ಟ್ರ ಅಥವಾ ಸಮಾಜದಲ್ಲಿ ಕಾಣಸಿಗದಂತಹ ಶ್ರೇಷ್ಠ ಸಾಂಸ್ಕೃತಿಕ ಪರಂಪರೆ ಭಾರತಕ್ಕಿದೆ. ಈ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಯೋಜಿಸಿರುವ ಡಾ. ಸಿ. ಸೋಮಶೇಖರ ಅವರ ಕಾರ್ಯ ಅಭಿನಂದನೀಯ ಎಂದು ತಿಳಿಸಿದರು.

2015ರಿಂದ ಈವರೆಗೆ ಹಲವಾರು ಸಾಧಕರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡುತ್ತಾ ಬಂದಿರುವುದು ಮಹತ್ವದ ಕೆಲಸವಾಗಿದೆ. ಇದರ ಹಿಂದೆ ಯಾವುದೇ ಸ್ವಾರ್ಥದ ಉದ್ದೇಶವಿದೆ ಎಂದು ನನಗೆ ಅನ್ನಿಸುವುದಿಲ್ಲ. ಬಹಳಷ್ಟು ಜನರು ನಿವೃತ್ತಿಯ ನಂತರ ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ, ಸೋಮಶೇಖರ ಅವರು ನಿವೃತ್ತಿಯ ನಂತರ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರ ಅವರ ದೂರದೃಷ್ಟಿಯನ್ನು ತೋರಿಸುತ್ತದೆ ಎಂದರು.

ಭಾರತದಲ್ಲಿ ಶೇ.60ರಷ್ಟು ಯುವಜನರಿದ್ದು, 40 ವರ್ಷ ವಯಸ್ಸಿನೊಳಗಿನ ಯುವಕರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಇಂದಿನ ಯುವಜನರಿಗೆ ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರದ ಬಗ್ಗೆ ಕೇವಲ ಪಾಠ ಮಾಡಲು ಹೋದರೆ ಅದು ಅವರಿಗೆ ಅಷ್ಟಾಗಿ ಪ್ರಿಯವಾಗುವುದಿಲ್ಲ. ಅವರಿಗೆ ಉತ್ತಮ ಶಿಕ್ಷಣ, ಉದ್ಯೋಗ ಮತ್ತು ಆಧುನಿಕ ಜಗತ್ತಿನಲ್ಲಿ ಬದುಕಲು ಅಗತ್ಯವಾದ ಕೌಶಲ್ಯಗಳೂ ಬೇಕಾಗಿವೆ ಎಂದು ಹೇಳಿದರು.

ಇಂದಿನ ಜೆನ್ ಜಿ ಪೀಳಿಗೆಯಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರದ ಬಗ್ಗೆ ಗೌರವವನ್ನು ಇನ್ನಷ್ಟು ಬೆಳೆಸುವ ಅಗತ್ಯವಿದೆ. ಅವರಿಗೆ ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರದ ಮಹತ್ವವನ್ನು ತಿಳಿಸಿಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ಬದಲಾದ ಆಧುನಿಕ ಜಗತ್ತಿನಲ್ಲಿ ಪಠ್ಯಪುಸ್ತಕಗಳಲ್ಲಿ ಹಿಂದೆ ಇದ್ದ 'ಮೋರಲ್ ಸೈನ್ಸ್'ನಂತಹ ಮೌಲ್ಯಾಧಾರಿತ ಶಿಕ್ಷಣ ಕಾಣೆಯಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ನಮಗೆ ಎಐಗಿಂತಲೂ ಸಂಸ್ಕೃತಿ ಮತ್ತು ಸಂಸ್ಕಾರದ ಅಗತ್ಯ ಹೆಚ್ಚಿದೆ. ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರವನ್ನು ನಾವು ಮರೆತುಬಿಟ್ಟರೆ, ಸಮಾಜದಲ್ಲಿ ಅದಕ್ಕೆ ಅಗತ್ಯವಾದ ಪ್ರೋತ್ಸಾಹ ನೀಡದೆ ಹೋದರೆ ಮುಂದಿನ ದಿನಗಳಲ್ಲಿ ನಾವು ಎಂತಹ ಭಾರತವನ್ನು ನೋಡಬೇಕಾಗುತ್ತದೆ ಎಂಬುದರ ಬಗ್ಗೆ ಯೋಚಿಸಬೇಕು ಎಂದು ಹೇಳಿದರು. ವಿಶ್ವದಲ್ಲಿಯೇ ಶ್ರೇಷ್ಠ ಸಂಸ್ಕೃತಿಯನ್ನು ಹೊಂದಿರುವ ಭಾರತವು ತನ್ನ ಮುಂದಿನ ಪೀಳಿಗೆಗೆ ಏನು ಹೇಳಲಿದೆ, ಯಾವ ಮೌಲ್ಯಗಳನ್ನು ಹಸ್ತಾಂತರಿಸಲಿದೆ ಎಂಬುದರ ಕುರಿತು ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ ಎಂದರು.

ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಪ್ರಶಸ್ತಿಗಳ ಮೂಲಕ ಗುರುತಿಸದೆ ಹೋದರೆ, ಅವರ ಸಾಧನೆ ಹಾಗೂ ಆ ಕ್ಷೇತ್ರಗಳ ಮಹತ್ವ ಸಮಾಜಕ್ಕೆ ಸಮರ್ಪಕವಾಗಿ ಪರಿಚಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಸಾಧಕರನ್ನು ಗುರುತಿಸಿ ಗೌರವಿಸುವ ಕೆಲಸವನ್ನು ಸೋಮಶೇಖರ ಅವರು ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಸಮಾಜ ಮತ್ತು ದೇಶ ನಿರಂತರವಾಗಿ ಬದಲಾಗುತ್ತಿದೆ. ಈ ಬದಲಾವಣೆಗಳ ನಡುವೆಯೂ ಭಾರತ ತನ್ನ ಸಂಸ್ಕೃತಿ, ಪರಂಪರೆ ಮತ್ತು ಮೌಲ್ಯಗಳನ್ನು ಉಳಿಸಿಕೊಂಡು ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸುವುದು ಸರ್ಕಾರದ ಜವಾಬ್ದಾರಿಯೂ ಆಗಿದೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳ ಸಂಖ್ಯೆಯೂ ಈಗ ನೂರರ ಗಡಿ ದಾಟಿದೆ. ವಿವಿಧ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿರುವ ಇಂತಹ ದಿಗ್ಗಜರನ್ನು ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ಹೇಳಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಡಾ. ಶಿವರಾಜ್ ವಿ.ಪಾಟೀಲ್ ಅವರು, ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಶಂಕರ್ ಬಿದರಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ. ವೂಡೇ ಪಿ.ಕೃಷ್ಣ, ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸಿ.ಸೋಮಶೇಖರ್ ಅವರು ಉಪಸ್ಥಿತರಿದ್ದರು.

ದಸರಾ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಜಿಲ್ಲಾಡಳಿತದ ವತಿಯಿಂದ ಅಕ್ಟೋಬರ್ 11 ರಿಂದ 21ರವರೆಗೆ ನಡೆಯಲಿರುವ ತುಮಕೂರು ದಸರಾ–2026ರ ಅಂಗವಾಗಿ ಆಯೋಜಿಸಲಾಗುವ ಧಾರ್ಮಿಕ ಕಾರ್ಯಕ್ರಮಗಳ ವೇದಿಕೆ ನಿರ್ಮಾಣ ಕಾಮಗಾರಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಇಂದು ವಿಧಿವತ್ತಾಗಿ ಚಾಲನೆ ನೀಡಿದರು.

ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ದಸರಾ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಕೈಗೊಳ್ಳಲಾಗುತ್ತಿರುವ ಪೂರ್ವ ಸಿದ್ಧತೆ ಹಾಗೂ ವೇದಿಕೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಧಾರ್ಮಿಕ ಕಾರ್ಯಕ್ರಮಗಳ ಆಯೋಜನೆ, ವಿಧಿ–ವಿಧಾನಗಳು ಹಾಗೂ ಅಗತ್ಯ ಸೌಲಭ್ಯಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ, ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯುವಂತೆ ಅಗತ್ಯ ಮುನ್ನೆಚ್ಚರಿಕೆ ಹಾಗೂ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ದಸರಾ ಅಂಗವಾಗಿ ನಿರ್ಮಿಸಲಾಗುತ್ತಿರುವ ಧಾರ್ಮಿಕ ಮಂಟಪ, ಸಾಂಸ್ಕೃತಿಕ ದಸರಾ ವೇದಿಕೆ, ನೃತ್ಯ ವೇದಿಕೆ ಸೇರಿದಂತೆ ವಿವಿಧ ವೇದಿಕೆಗಳ ನಿರ್ಮಾಣ ಕಾರ್ಯಗಳ ಪ್ರಗತಿಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿದರು. ಪ್ರೇಕ್ಷಕರಿಗೆ ಕಾರ್ಯಕ್ರಮಗಳನ್ನು ಸುಗಮವಾಗಿ ವೀಕ್ಷಿಸಲು ಅನುಕೂಲವಾಗುವಂತೆ ಆಸನ ವ್ಯವಸ್ಥೆ, ವಿದ್ಯುತ್ ಬೆಳಕು, ಧ್ವನಿ ವ್ಯವಸ್ಥೆ, ಸುರಕ್ಷತಾಕ್ರಮ ಹಾಗೂ ಪ್ರವೇಶ ನಿರ್ಗಮನ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ದಸರಾ ಕಾರ್ಯಕ್ರಮಗಳ ವಿವಿಧ ವೇದಿಕೆಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಕಲಾ ಹಾಗೂ ನೃತ್ಯ ಕಾರ್ಯಕ್ರಮಗಳು ಸಾರ್ವಜನಿಕರು ಹಾಗೂ ವಿವಿಧ ಕಲಾ ತಂಡಗಳಿಗೆ ಅಗತ್ಯವಾದ ಮೂಲಸೌಕರ್ಯ ಕಲ್ಪಿಸುವ ಕುರಿತು ಚರ್ಚಿಸಲಾಯಿತು. ಕಾರ್ಯಕ್ರಮಗಳ ವೇಳಾಪಟ್ಟಿಗೆ ಅನುಗುಣವಾಗಿ ವೇದಿಕೆಗಳು ಹಾಗೂ ಸಂಬಂಧಿತ ಸೌಲಭ್ಯಗಳ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜ ಬಿ.ವಿ., ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ, ಮಹಾನಗರ ಪಾಲಿಕೆ ಆಯುಕ್ತ ಶುಭ, ತುಮಕೂರು ಉಪ ವಿಭಾಗಾಧಿಕಾರಿ ನಾಹೀದ ಜಮ್ ಜಮ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ದಸರಾ ಸಮಿತಿಗಳ ಪದಾಧಿಕಾರಿಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಜೀವ ಭಯದಲ್ಲೇ ಕರ್ತವ್ಯ ನಿರ್ವಹಣೆ
ಸುರಿದ ಮಳೆಗೆ ಸೋರುತ್ತಿರುವ ಪೊಲೀಸ್ ಠಾಣೆ

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಾಗಡ: ತಾಲ್ಲೂಕಿನ ವೈ. ಎನ್ ಹೊಸಕೋಟೆ ಪೊಲೀಸ್ ಠಾಣೆಯು ಮಳೆ ಬಂದರೆ ಸೋರುತ್ತಿದ್ದು, ಯಾವಾಗ ಸೀಲಿಂಗ್ ತಲೆ ಮೇಲೆ ಬೀಳುತ್ತೋ ಎಂಬ ಭಯದಲ್ಲೇ ಪೊಲೀಸರು ಕರ್ತವ್ಯ ನಿರ್ವಹಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂದಾಗಲೆಲ್ಲಾ ಠಾಣೆಯಲ್ಲಿ ಮಳೆ ನೀರು ಸೋರಿ ಕೆಸರು ಗದ್ದೆ ಸೃಷ್ಟಿಯಾಗುತ್ತಿದೆ.

ತಾಲ್ಲೂಕಿನ ಅತಿ ದೊಡ್ಡ ಹೋಬಳಿ ಕೇಂದ್ರದ ವೈ. ಎನ್. ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಇಂತಹ ದಯನೀಯ ಸ್ಥಿತಿ ಇದ್ದು ಕಳೆದ ಎರಡು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಪೊಲೀಸ್ ಠಾಣೆ ಸಂಪೂರ್ಣವಾಗಿ ಠಾಣೆಯ ಕೊಠಡಿಗಳೆಲ್ಲ ಮಳೆ ನೀರಿನಿಂದ ತುಂಬಿವೆ.

ಕಟ್ಟಡದ ಸೀಲಿಂಗ್ ಸೋರುತ್ತಿದ್ದು, ಗೋಡೆಗಳೆಲ್ಲ ತೇವಗೊಂಡು ಸಿಮೆಂಟ್ ಪ್ಲಾಸ್ಟಿಂಗ್ ಕಿತ್ತು ಬೀಳುತ್ತಿದೆ. ಮಹತ್ವದ ದಾಖಲೆಗಳು, ಎಫ್ಐಆರ್ ಪುಸ್ತಕಗಳು, ಕಂಪ್ಯೂಟರ್ ಗಳನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಮುಚ್ಚಿ ರಕ್ಷಿಸಿಕೊಳ್ಳುವ ಪರಿಸ್ಥಿತಿ ಬಂದಿದೆ.

ದೂರು ನೀಡಲು ಬರುವ ಸಾರ್ವಜನಿಕರು ಮತ್ತು ಕರ್ತವ್ಯದಲ್ಲಿರುವ ಪೊಲೀಸ್ ಸಿಬ್ಬಂದಿ ತಲೆಗೆ ಕೊಡೆ ಹಿಡಿದು ಕೂರುವಂತಾಗಿದೆ. ರಾತ್ರಿ ಪಾಳಿಯಲ್ಲಿರುವ ಸಿಬ್ಬಂದಿ ಮಲಗಲೂ ಜಾಗವಿಲ್ಲದೆ ಪರದಾಡುತ್ತಿದ್ದಾರೆ. ಅಪರಾಧಿಗಳನ್ನು ಹಿಡಿಯಬೇಕಾದ ಪೊಲೀಸರೇ ಸೋರುವ ಕಟ್ಟಡದಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾದ ದುಸ್ಥಿತಿ ಬಂದಿದೆ. ಕೂಡಲೇ ಜಿಲ್ಲಾಡಳಿತ ಮತ್ತು ಇಲಾಖೆಯ ಮೇಲಾಧಿಕಾರಿಗಳು ಗಮನಹರಿಸಿ, ಹೊಸ ಕಟ್ಟಡ ನಿರ್ಮಿಸಿಕೊಡಬೇಕು ಅಥವಾ ದುರಸ್ತಿ ಮಾಡಿಸಬೇಕಿದೆ. ಆ ಮೂಲಕ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕು ಎಂದು ಪೊಲೀಸ್ ಸಿಬ್ಬಂದಿ ಕೋರಿದ್ದಾರೆ.

ಶಾಸಕರು ಈ ಹಿಂದೆ ಠಾಣೆಗೆ ಭೇಟಿ ನೀಡಿದಾಗ ಠಾಣೆಯ ದುಸ್ಥಿತ್ಯ ಬಗ್ಗೆ ಮನವರಿಕೆ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಹೊಸ ಠಾಣೆ ನಿರ್ಮಾಣದ ಬಗ್ಗೆ ಭರವಸೆ ನೀಡಿದ್ದರು. ಆದರೆ ಭರವಸೆ ಇನ್ನೂ ಈಡೇರದೆ ಇಂದಿನ ಸ್ಥಿತಿಯಲ್ಲಿ ಠಾಣೆಯ ಸಿಬ್ಬಂದಿ ಜೀವಿಸಬೇಕಾಗಿದ್ದು, ತಕ್ಷಣ ಹೊಸ ಠಾಣೆ ನಿರ್ಮಾಣ ಕಾರ್ಯ ಪ್ರಾರಂಭವಾಗಬೇಕು ಎಂದು ಮುಖಂಡರು ಮತ್ತು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸಾಹೇ– ಬಾಲಾಜಿ ಎಲೆಕ್ಟ್ರೋ ಕಂಟ್ರೋಲ್ ಕಂಪನಿಯೊಂದಿಗೆ ಪರಸ್ಪರ ಒಡಂಬಡಿಕೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಕ್ಷೇತ್ರಗಳಲ್ಲಿ ವೇಗವಾಗಿ ಬದಲಾಗುತ್ತಿರುವ ಉದ್ಯಮ ತಂತ್ರಜ್ಞಾನಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟಕ್ಕೆ ಸಮರ್ಥ ವೃತ್ತಿಪರರನ್ನಾಗಿ ರೂಪಿಸುಸ ಸಂಬಂಧ ವಿದ್ಯಾರ್ಥಿಗಳಿಗೆ ಕೌಶಲ್ಯ ಆಧಾರಿತ ತರಬೇತಿ, ಇಂಟರ್ನಶಿಪ್, ಉದ್ಯೋಗ ಹಾಗೂ ಭೋಧಕರಿಗೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸುವುದು ಸೇರಿದಂತೆ ಹಲವು ಮುಕ್ತ ಅವಕಾಶಗಳನ್ನು ನೀಡುವ ಸಂಬಂಧ ಬೆಂಗಳೂರಿನ ಬಾಲಾಜಿ ಎಲೆಕ್ಟ್ರೋ ಕಂಟ್ರೋಲ್ ಕಂಪನಿಯೊಂದಿಗೆ ನಗರದ ಶ್ರೀ ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗ ಪರಸ್ಪರ ಜಂಟಿ ಒಡಂಬಡಿಕೆ ಮಾಡಿಕೊಂಡಿತು.

ನಗರದ ಎಸ್ಎಸ್ಐಟಿ ಕಾಲೇಜಿನ ಚಾಣಕ್ಯ ಬ್ಲಾಕ್‌ನ ಪಿಜಿ ಸೆಮಿನಾರ್ ಸಭಾಂಗಣದಲ್ಲಿ ಶೈಕ್ಷಣಿಕ ಮತ್ತು ಉದ್ಯಮಕ್ಷೇತ್ರದ ಸಹಭಾಗಿತ್ವದಡಿಯಲ್ಲಿ ನಡೆದ ಒಡಂಬಡಿಕೆ ಕಾರ್ಯಕ್ರಮದಲ್ಲಿ ಸಾಹೇ ವಿವಿಯ ಶ್ರೀ ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಮಹಾಂತೇಶ್ ಎಂ ನಡಕಟ್ಟಿ ಹಾಗೂ ಬಾಲಾಜಿ ಎಲೆಕ್ಟ್ರೋ ಕಂಪನಿ ವ್ಯವಸ್ಥಾಪಕರಾದ ಪ್ರೇಮ ಅವರ ಜೊತೆ ನಡೆದ ಚರ್ಚೆಯ ನಂತರ ಒಡಂಬಡಿಕೆ ಪತ್ರಗಳ ವಿನಿಮಯ ಮಾಡಿಕೊಳ್ಳಲಾಯಿತು.

ನಂತರ ಮಾತನಾಡಿದ ಬಾಲಾಜಿ ಎಲೆಕ್ಟ್ರೋ ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿ ಪ್ರೇಮ ಸಾಹೇ ವಿವಿಯೊಂದಿಗ ಒಡಬಡಿಕೆ ಮಾಡಿಕೊಂಡಿರುವುದರಿಂದ ಸಂತಸದ ವಿಷಯ. ಪ್ರಮುಖ ಶೈಕ್ಷಣಿಕ ಸಂಸ್ಥೆಗಳಿಗೆ ಸಂಶೋಧನೆ ಮತ್ತು ಆವಿಷ್ಕಾರಕ್ಕಾಗಿ ಹಾಗೂ ಅಧ್ಯಯನಕ್ಕೆ ಬೆಂಬವನ್ನು ತಮ್ಮ ಸಂಸ್ಥೆ ನೀಡಲಿದೆ ಎಂದರು.

ಪ್ರಾಂಶುಪಾಲರಾದ ಡಾ. ಮಹಾಂತೇಶ್ ಎಂ. ನಡಕಟ್ಟಿ ಅವರು ಮಾತನಾಡಿ ಉದ್ಯಮದೊಂದಿಗೆ ಮಾಡಿಕೊಂಡಿರುವ ಒಪ್ಪಂದವು ಕಾಲೇಜಿನ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಾಗಿದೆ. ಈ ಒಪ್ಪಂದವು ವಿದ್ಯಾರ್ಥಿಗಳ ಇಂಟರ್ನ್‌ಶಿಪ್, ಪ್ರಾಯೋಗಿಕ ತರಬೇತಿ ಮತ್ತು ಸಂಶೋಧನೆಗೆ ದೊಡ್ಡ ಮಟ್ಟದ ಬೆಂಬಲ ನೀಡಲಿದೆ ಎಂದರು.

ಈ ಒಪ್ಪಂದವು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್, ಕೈಗಾರಿಕಾ ತರಬೇತಿ, ಸಂಶೋಧಕರಿಗೆ ನೈಜ ಪ್ರಾಜೆಕ್ಟ್‌ಗಳು ಹಾಗೂ ಬೋಧಕರಿಗೆ ವಿಶೇಷ ತರಬೇತಿ ನೀಡಿ ಮುಂದಿನ ಹಂತಕ್ಕೆ ಕೊಂಡೊಯ್ಯಲಾಗುವುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಡೀನ್ ಡಾ. ದಿವ್ಯ ಪ್ರಭ, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ ಪ್ರದೀಪ್, ಕೋಆರ್ಡಿನೇಟರ್ ಡಾ ಯೋಗಾನಂದ, ಪ್ರೊಫೆಸರ್ ಶೇಷಾದ್ರಿ, ನಂದನ್, ವೇಣುಗೋಪಾಲ್ ಚೌವಾಹ್ಣ್ ಮೊದಲಾದವರು ಹಾಜರಿದ್ದರು.

ಗಾಂಧಿ ಜಯಂತಿ : ಮಾಂಸ ಮಾರಾಟ ನಿಷೇಧ

ತುಮಕೂರು: ಗಾಂಧಿ ಜಯಂತಿ ಪ್ರಯುಕ್ತ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಅಕ್ಟೋಬರ್ 1ರ ಸಂಜೆ 5 ರಿಂದ 2ರ ಮಧ್ಯರಾತ್ರಿ 12 ಗಂಟೆಯವರೆಗೆ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಈ ಅವಧಿಯಲ್ಲಿ ಮಾಂಸ ಮಾರಾಟ ಹಾಗೂ ಸಂಗ್ರಹಣೆ ಮಾಡುವುದನ್ನು ನಿಷೇಧಿಸಲಾಗಿದ್ದು, ತಪ್ಪಿದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ) ತಿಳಿಸಿದ್ದಾರೆ.

ಅ.1ರಂದು ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ಶಿರಾ ಗ್ರಾಮೀಣ ಉಪವಿಭಾಗ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವುದರಿಂದ ಅಕ್ಟೋಬರ್ 1ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬುಕ್ಕಾಪಟ್ಟಣ, ಪುರ, ಮಣ್ಣಮ್ಮ ಟೆಂಪಲ್ ಮತ್ತು ಮಾರುತಿ ಎನ್.ಜೆ.ವೈ. ಪೂರಕಗಳ ಬುಕ್ಕಾಪಟ್ಟಣ ಹಾಗೂ ರಾಮಲಿಂಗಾಪುರ ಪಂಚಾಯ್ತಿಯ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ರೈತರು/ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

ಹೊಸ ಮತದಾರರ ನೋಂದಣಿ ಅಭಿಯಾನ ಬೀದಿ ನಾಟಕಕ್ಕೆ ಸಿಇಒ ಚಾಲನೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ತುಮಕೂರು ಮತ್ತು ಸ್ವೀಪ್ ಸಮಿತಿಯ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ 2026 ಎಸ್ಐಆರ್ ಅಂಗವಾಗಿ ಜಿಲ್ಲಾದ್ಯಂತ ಯಾವುದೇ ಮತದಾರರು ಮತದಾರರ ಪಟ್ಟಿಯಿಂದ ಹೊರಗೂಳಿಯದಂತೆ ತಮ್ಮ ಮತವನ್ನು ಖಾತ್ರಿಪಡಿಸಿಕೊಳ್ಳುವುದರ ಜೊತೆಗೆ 18 ವರ್ಷ ತುಂಬಿದ ಯುವಕ ಯುವತಿಯರು ಕಡ್ಡಾಯವಾಗಿ ಮತದಾರರ ಪಟ್ಟಿಗೆ ತಮ್ಮ ಹೆಸರನ್ನು ಸೇರ್ಪಡೆ ಮಾಡಿ ಸಂವಿಧಾನ ಬದ್ಧ ಹಕ್ಕನ್ನು ಪಡೆದು ಪ್ರಜಾಪ್ರಭುತ್ವಕ್ಕೆ ಶಕ್ತಿ ನೀಡಬೇಕೆಂದು ಅಭಿಯಾನಕ್ಕೆ ಚಾಲನೆ ನೀಡಿದ ತುಮಕೂರು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಅಶ್ವಿಜ ಬಿವಿ ತಿಳಿಸಿದರು ಈ ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲಾ ಪಂಚಾಯತ್ನ ಅಧಿಕಾರಿ ವರ್ಗದವರು ತುಮಕೂರು ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು ಪೊಲೀಸ್ ಇಲಾಖೆ ಉಪಸ್ಥಿತರಿದ್ದರು ತುಮಕೂರಿನ ದವನ ಭೂಮಿಕೆ ಸಾಂಸ್ಕೃತಿಕ ಟ್ರಸ್ಟ್ ನ ಕಲಾ ತಂಡದವರಾದ ಕಾಂತರಾಜು ಕೌತ ಮಾರನಹಳ್ಳಿ, ಡಿಸಿ ಕುಮಾರ್ ದೊಮ್ಮನ ಕುಪ್ಪೆ, ಬಾಲಕೃಷ್ಣ ಗೊಲ್ಲಳ್ಳಿ, ರೂಪ ತಿಪಟೂರು, ಹೇಮಂತ್ ಕುಮಾರ್ ಜಿ ಆರ್, ದಲಿತ ಗಂಗಣ್ಣ ಇರಕಸಂದ್ರ, ಗಂಗ ಭೈರ ರವರು ಸ್ವೀಪ್ ಸಮಿತಿ ತುಮಕೂರು ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಎಸ್ಐಆರ್ 2026ರ ಬಗ್ಗೆ ಹಾಗೂ ಹೊಸ ಮತದಾರರ ನೋಂದಣಿಯ ಬಗ್ಗೆ ಜಾಗೃತಿ ಗೀತೆಗಳು ಮತ್ತು ಬೀದಿ ನಾಟಕದ ಮೂಲಕ ಎಲ್ಲ ಮತದಾರರಿಗೆ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸಿದರು.



ಪದವೀಧರರ ಕ್ಷೇತ್ರದ ಚುನಾವಣೆ : ಉಮೇದುವಾರಿಕೆ ಸಲ್ಲಿಸಲು ಅ.6 ಕಡೆಯ ದಿನ

ತುಮಕೂರು: ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ಅಕ್ಟೋಬರ್ 23ರಂದು ದ್ವೈವಾರ್ಷಿಕ ಚುನಾವಣೆ ನಡೆಸಲು ವೇಳಾಪಟ್ಟಿ ಹೊರಡಿಸಿದ್ದು, ವೇಳಾಪಟ್ಟಿಯನ್ವಯ ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರು ತಮ್ಮ ನಾಮಪತ್ರವನ್ನು ಸಲ್ಲಿಸಲು ಅಕ್ಟೋಬರ್ 6 ಕಡೆಯ ದಿನವಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ. ಉಮೇದುವಾರರು ಅಥವಾ ಅವರ ಸೂಚಕರು ನಾಮಪತ್ರಗಳನ್ನು ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿ ಪ್ರಭು ಜಿ. ಅವರಿಗೆ ಅಕ್ಟೋಬರ್ 6ರೊಳಗಾಗಿ ಸಲ್ಲಿಸಬಹುದು. ನಾಮಪತ್ರವನ್ನು ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027 ಈ ವಿಳಾಸದಲ್ಲಿ ನಿಗದಿತ ದಿನಾಂಕದೊಳಗೆ ಬೆಳಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ (ಸರ್ಕಾರಿ ರಜಾ ದಿನ ಹೊರತು) ನಡುವೆ ಸಲ್ಲಿಸಬಹುದು.

ನಾಮಪತ್ರದ ನಮೂನೆಯನ್ನು ಮೇಲ್ಕಂಡ ಸ್ಥಳ ಮತ್ತು ವೇಳೆಯಲ್ಲಿ ಪಡೆದುಕೊಳ್ಳಬಹುದು. ನಾಮಪತ್ರಗಳನ್ನು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಅಕ್ಟೋಬರ್ 7ರ ಬುಧವಾರದಂದು ಬೆಳಗ್ಗೆ 11 ಗಂಟೆಗೆ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು. ಉಮೇದುವಾರರು ಅಥವಾ ಅವರ ಯಾರೇ ಸೂಚಕರು ಅಥವಾ ಅದನ್ನು ಸಲ್ಲಿಸಲು ಉಮೇದುವಾರನಿಂದ ಲಿಖಿತದಲ್ಲಿ ಅಧಿಕೃತನಾದ ಆತನ ಚುನಾವಣಾ ಏಜೆಂಟನು ನಿರ್ದಿಷ್ಟಪಡಿಸಿದ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿ ಇಬ್ಬರಲ್ಲೊಬ್ಬ ಅಧಿಕಾರಿಗೆ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ತಿಳುವಳಿಕೆ ಪತ್ರವನ್ನು ಅಕ್ಟೋಬರ್ 9ರ ಶುಕ್ರವಾರ ಮಧ್ಯಾಹ್ನ 3 ಗಂಟೆಯೊಳಗಾಗಿ ಸಲ್ಲಿಸಬಹುದು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.